
# ಅನಂತಪಥ

ಜನ್ಮದಿನದ ವಿಶೇಷ ಸಂಚಿಕೆ 63 ಅನಂತಕುಮಾರ್



ಸಂಪುಟ - 2 ಸೆಪ್ಟೆಂಬರ್- 2022 ಸಂಚಿಕೆ - 27



# ಪರಿಷತ್ತಿನಲ್ಲಿ ಅನಂತ ನಾಯಕತ್ವ



ಎಪ್ಪತ್ತು ಎಂಭತ್ತರ ದಶಕಗಳಲ್ಲಿ ವ್ಯಾಪಕವಾಗಿ ನಡೆದ ವಿದ್ಯಾರ್ಥಿ ಹೋರಾಟಗಳಲ್ಲಿ ನೂರಾರು ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದ್ದರು. ಅವರಲ್ಲಿ ಹೆಚ್ಚಿನವರನ್ನು ಅನಂತಕುಮಾರರೇ ಕರೆತಂದಿದ್ದರು. ರಾಜ್ಯದ ಮೂಲೆ ಮೂಲೆಗಳಿಗೆ ಓಡಾಡಿ ಕಾರ್ಯಕರ್ತರನ್ನು ಸೇರಿಸುವುದರ ಜೊತೆಗೆ ಅವರೇ ಮುಂಚೂಣಿಯಲ್ಲಿ ನಿಂತು ಹೋರಾಟ ಮಾಡಿದ್ದರು.

ವಿದ್ಯಾರ್ಥಿ ಪರಿಷತ್ತಿನಲ್ಲಿ ಅನಂತಕುಮಾರರ ಹೋರಾಟಗಳಲ್ಲಿ ಕ್ಯಾಪಿಟೇಷನ್‌ಶುಲ್ಕದ ವಿರುದ್ಧ ನಡೆದ ಹೋರಾಟವನ್ನು ಮರೆಯಲಾಗದು. ರಾಜ್ಯದಲ್ಲಿ ಸ್ಥಾಪಿತವಾದ ಅನೇಕ ಖಾಸಗಿ ಇಂಜನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳು ವಿಧಿಸುವ ಕ್ಯಾಪಿಟೇಷನ್ ಶುಲ್ಕದ ಹಾವಳಿಯು ಪ್ರತಿಭಾನ್ವಿತ ಬಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಆಕಾಂಕ್ಷೆಗಳಿಗೆ ತಣ್ಣೀರೆರಚಿತ್ತು. ಇದನ್ನು ವಿರೋಧಿಸಿ 1983 ರಲ್ಲಿ "ಕ್ಯಾಪಿಟೇಷನ್ ಹಾವಳಿ - ಗಂಟು ಮೂಟೆ ಕಟ್ಟಲಿ" ಎಂಬ ಘೋಷಣೆಯೊಂದಿಗೆ ಅನಂತಕುಮಾರ್ ರಾಜ್ಯಮಟ್ಟದ ಹೋರಾಟವನ್ನು ಪ್ರಾರಂಭಿಸಿದರು. ರಾಜ್ಯಾದ್ಯಂತ ನಡೆದ ಈ ಬೃಹತ್ ಹೋರಾಟದ ಅಂಗವಾಗಿ ಊರೂರುಗಳಲ್ಲಿ ಪ್ರದರ್ಶನ ಮತ್ತು ಧರಣಿಗಳ ಮೂಲಕ ಪ್ರತಿಭಟನೆ ನಡೆಯಿತು. ನಾನು ಕೂಡ ಎಬಿವಿಪಿಯ ಈ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೆ.

ಅನಂತಕುಮಾರರ ಹೋರಾಟಗಳಿಗೆ ವಿದ್ಯಾರ್ಥಿಗಳ ಹಿತಾಸಕ್ತಿಯೊಂದೇ ಲಕ್ಷ್ಯವಾಗಿತ್ತು ಎಂಬುದಕ್ಕೆ ವಾರ್ಷಿಕ ಪರೀಕ್ಷೆಗಳ ವಿಷಯದಲ್ಲಿ ಅವರು ತೆಗೆದುಕೊಂಡ ನಿಲುವು ಒಂದು ಉತ್ತಮ ಉದಾಹರಣೆ. ಆ ಕಾಲದಲ್ಲಿ ಧಾರವಾಡದ ಕರ್ನಾಟಕ ಮತ್ತು ರಾಜಧಾನಿಯ ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ವಾರ್ಷಿಕ ಪರೀಕ್ಷೆಗಳು ನಿಯತ ಕಾಲಕ್ಕೆ ನಡೆಯುತ್ತಿರಲಿಲ್ಲ. ಇದಕ್ಕೆ ಆಡಳಿತಾತ್ಮಕ ಕಾರಣಗಳು ಎಷ್ಟಿದ್ದವೋ ಅಷ್ಟೇ ಸಮಸ್ಯೆ ವಿದ್ಯಾರ್ಥಿಗಳಿಂದಲೂ ಉಂಟಾಗುತ್ತಿತ್ತು. ಪರೀಕ್ಷೆಗೆ ಯಾವುದೇ ತಯಾರಿ ಮಾಡಿಕೊಳ್ಳದ ಒಂದು ವರ್ಗದ ವಿದ್ಯಾರ್ಥಿಗಳು ಪರೀಕ್ಷೆ ಬೇಡ ಎಂದು ಗಲಾಟೆ ಮಾಡಿ ಮುಂದೂಡಿಸುತ್ತಿದ್ದರು. ಇವರ ಜೊತೆ ಅನೇಕ ಪೋಕರಿ ಹುಡುಗರೂ, ವಿದ್ಯಾರ್ಥಿಸಂಘಗಳ ಮುಖಂಡರೂ ಸೇರಿಕೊಂಡಿರುತ್ತಿದ್ದರು. ಇದನ್ನು ಗಮನಿಸಿದ ಅನಂತಕುಮಾರರು ಆಯಾ ವಿಶ್ವವಿದ್ಯಾಲಯಗಳಿಗೆ ಸೇರಿದ ಸ್ಥಳೀಯ ವಿದ್ಯಾರ್ಥಿಗಳನ್ನೇ ಸಂಘಟಿಸಿ ಕಾಲಕ್ಕೆ ಸರಿಯಾಗಿ ಪರೀಕ್ಷೆ ನಡೆಯುವುದು ನಿಮ್ಮ ಹಕ್ಕು ಎಂದು ಅವರಿಗೆ ಅರಿವು ಮೂಡಿಸುತ್ತಿದ್ದರು. ಅನಂತಕುಮಾರರ ನಿಲುವು ತಮ್ಮ ಹಿತಾಸಕ್ತಿಗಳಿಗೆ ಪೋಷಕವಾಗಿದೆಯೆಂದು ವಿದ್ಯಾರ್ಥಿಸಮುದಾಯಕ್ಕೆ ಮನವರಿಕೆಯಾಗುತ್ತಿತ್ತು. ಕಾಲಕಾಲಕ್ಕೆ ಪರೀಕ್ಷೆಗಳು ಸುಸೂತ್ರವಾಗಿ ನಡೆದು ವಿಶ್ವವಿದ್ಯಾಲಯದ ಅಧಿಕಾರವರ್ಗಕ್ಕೂ ಸಮಾಧಾನವಾಗುತ್ತಿದ್ದಿತ್ತು. ವಿದ್ಯಾರ್ಥಿಗಳ ಸಮಸ್ಯೆಗಳ ಈಡೇರಿಕೆಯೂ ಅವರ ಆದ್ಯತೆಯಾಗಿತ್ತು. ತರಗತಿಗಳಿಂದ ವಿದ್ಯಾರ್ಥಿಗಳನ್ನು ಬಿಡಿಸಿ ಅಧಿಕಾರಿಗಳ ಹತ್ತಿರ ಕರೆದುಕೊಂಡು ಹೋಗಿ ನಿಮ್ಮ ಹಕ್ಕೊತ್ತಾಯಗಳನ್ನು ಗಟ್ಟಿದನಿಯಲ್ಲಿ ಕೇಳಿ ಎಂದು ಅವರನ್ನು ಹುರಿದುಂಬಿಸುತ್ತಿದ್ದರು. ಕಾಲೇಜುಗಳಲ್ಲಿ ಸಾಮಾನ್ಯವಾಗಿದ್ದ ರ‍್ಯಾಗಿಂಗ್ ಮತ್ತು ಹೆಣ್ಣುಮಕ್ಕಳನ್ನು ಕೀಟಲೆ ಮಾಡುವ ಪ್ರವೃತ್ತಿಯ ಕಡೆಗೂ ಆರ‍್ಯು ಗಮನ ಹರಿಸಿದ್ದರು. ವಿದ್ಯಾರ್ಥಿ ಹೋರಾಟಗಳ ರೂಪುರೇಷೆಗಳನ್ನು ಕೃಷ್ಣ ಭಟ್ಟರು, ದತ್ತಾತ್ರೇಯ ಹೊಸಬಾಳೆ, ಅನಂತಕುಮಾರ್ ಮತ್ತಿತರರು ಒಟ್ಟಿಗೆ ಸೇರಿ ನಿರೂಪಿಸುತ್ತಿದ್ದರು. ಅವುಗಳನ್ನು ಜಾರಿಗೆ ತರಲು ರಾಜ್ಯಾದ್ಯಂತ ಪ್ರವಾಸ ಮಾಡಿ ವಿದ್ಯಾರ್ಥಿಗಳನ್ನು ಅಣಿಗೊಳಿಸುತ್ತಿದ್ದವರು, ಅನಂತಕುಮಾರ್. ಅವರು ಒಂದು ಕಡೆ ನಿಂತು ನೇತೃತ್ವ ವಹಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ರಾಜ್ಯವ್ಯಾಪಿ ಪ್ರವಾಸ ಕೈಗೊಂಡು ಎಲ್ಲೆಡೆಯ ವಿದ್ಯಾರ್ಥಿಸಮುದಾಯವನ್ನು ಹುರಿದುಂಬಿಸುತ್ತಿದ್ದರು. ಹೀಗೆ ಅನಂತಕುಮಾರ್ ರಾಜ್ಯಾದ್ಯಂತ ನಡೆದ ಎಲ್ಲ ಹಿರಿಕಿರಿಯ ಹೋರಾಟಗಳ ಹಿಂದಿನ ಪ್ರೇರಕಶಕ್ತಿಯಾಗಿದ್ದರು ಎನ್ನಬಹುದು. ಕೆಲವೊಮ್ಮೆ ನಮ್ಮಿಂದ ಇಷ್ಟೆಲ್ಲ ಮಾಡಿಸುವ ಅನಂತಕುಮಾರರೇ ನಮ್ಮ ಚಳವಳಿಗಳಲ್ಲಿ ಭಾಗವಹಿಸುವುದಿಲ್ಲವಲ್ಲ ಎಂದು ವಿದ್ಯಾರ್ಥಿ ಮುಖಂಡರಿಗೆ ಅನ್ನಿಸಿದ್ದೂ ಉಂಟು. ಆದರೆ ಅನಂತಕುಮಾರರು ಒಂದು ಊರಿನಲ್ಲಿ ಚಳವಳಿಯನ್ನು ಸಂಘಟಿಸಿ ಅಲ್ಲೇ ನಿಲ್ಲಲು ಅವಕಾಶವೇ ಆಗುತ್ತಿರಲಿಲ್ಲ. ಮುಂದಿನ ಊರಿನ ಇನ್ಯಾವುದೋ ಸಮಸ್ಯೆಗಳ ಬಗ್ಗೆ ಗಮನ ಹರಿಸಲು ಹೋಗಬೇಕಾಗುತ್ತಿತ್ತು. ಅಲ್ಲಿ ಯಾವುದೋ ವಿದ್ಯಾರ್ಥಿಗೆ ಪೋಲೀಸರು ಹೊಡೆದರು, ಕಾಲೇಜಿನಲ್ಲಿ ಇನ್ನೊಂದು ಸಣ್ಣ ಘಟನೆ ನಡೆಯಿತು, ಎಲ್ಲದಕ್ಕೂ ಅವರು ಗಮನ ಹರಿಸಬೇಕಾಗಿತ್ತು.



ಅನಂತಕುಮಾರ್ ಅವರ 63 ನೇ ಜನ್ಮ ದಿನದ ಸ್ಮರಣೆಯಲ್ಲಿ ವಿಶೇಷ ಲೇಖನ

ಡಾ.ತೇಜಸ್ವಿನಿ ಅನಂತಕುಮಾರ್

(ಪುಟ 5 ರಲ್ಲಿ ಮುಂದುವರೆದಿದೆ)



ಅನಂತಪಥ ಮಾಸಪತ್ರಿಕೆಯ 26 ನೇ ಸಂಚಿಕೆಯನ್ನು ನಿವೃತ್ತ ಯೋಜನಾ ನಿರ್ದೇಶಕರು ಹಾಗೂ ತೇಜಸ್ ಲಘು ಯುದ್ಧ ವಿಮಾನದ ಮುಖ್ಯ ವಿನ್ಯಾಸಕಾರರಾದ ಪದ್ಮಶ್ರೀ ಡಾ. ಕೋಟಾ ಹರಿನಾರಾಯಣ ಅವರು 22 ಆಗಸ್ಟ್ 2022 ರಂದು ಬಿಡುಗಡೆ ಮಾಡಿದರು.



# ಬೆಳೆಯುವ ಸಿರಿ ಮೊಳಕೆಯಲ್ಲಿ

- ಡಾ. ವಾಮನಾಚಾರ್ಯ
ಮಾಜಿ ಅಧ್ಯಕ್ಷರು, ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ

ನಾನು ಕಂಡಂತೆ



ಅನಂತಕುಮಾರ್


ನಾನು ಬೆಳಗಾವಿಯ ಜೆಎಎಸ್ಎಸ್ ಕಾಲೇಜಿನಲ್ಲಿ ಬಿಎಸ್ಸಿ ಮುಗಿಸಿ ವೈದ್ಯಕೀಯ ವೈದ್ಯಕೀಯ ವ್ಯಾಸಂಗಕ್ಕಾಗಿ 1967 ರಲ್ಲಿ ಹುಬ್ಬಳ್ಳಿಗೆ ಬಂದೆ. ಹುಬ್ಬಳ್ಳಿಗೆ ಬಂದ ದಿನಗಳಿಂದಲೇ ನನ್ನ ಮತ್ತು ಅನಂತಕುಮಾರರ ನಡುವೆ ಪರಿಚಯ ಬೆಳೆದು ಬಂದಿತ್ತು. ನಾನು ಎಂಬಿಬಿಎಸ್ ಮೊದಲ ವರ್ಷದಲ್ಲಿದ್ದಾಗಲೇ ಹುಬ್ಬಳ್ಳಿ ನಗರದ ಕಾರ್ಯವಾಹ ಆಗಿದ್ದೆ. ಹುಬ್ಬಳ್ಳಿಯ ಬೇರೆ ಬೇರೆ ಬಡಾವಣೆಗಳಲ್ಲಿದ್ದ ಸಂಘದ ಶಾಖೆಗಳ ಕೆಲಸಗಳನ್ನು ನಾನು ನೋಡಿಕೊಳ್ಳುತ್ತಿದ್ದೆ. ಅನಂತಕುಮಾರರು ವಾಸವಾಗಿದ್ದ ಎಂಟಿಎಸ್ ಕಾಲೋನಿಯಲ್ಲಿಯೂ ಒಂದು ಶಾಖೆ ಇತ್ತು. ಅದು ಅವರ ಮನೆಯ ಎದುರಿಗೇ ನಡೆಯುತ್ತಿತ್ತು. ಹೀಗಾಗಿ, ಅನಂತಕುಮಾರರಿಗಿಂತ ಮೊದಲು ಅವರ ತಂದೆತಾಯಿಯವರ ಪರಿಚಯ ನನಗಾಯಿತು. ಅವರ ಮನೆ ತುಂಬ ಚಿಕ್ಕದಾಗಿತ್ತು. ಸಾಮಾನ್ಯ ಹಂಚಿನ ಮನೆಯ ಮಧ್ಯದಲ್ಲಿ ಒಳಕೋಣೆಯನ್ನು ಮರೆಮಾಡುವಷ್ಟು ಎತ್ತರದ ಒಂದು ಮೋಟುಗೋಡೆ. ಒಳಗಿನ ಮಾತುಗಳು ಹೊರಗೆ ಕುಳಿತವರಿಗೂ ಕೇಳಿಸುವಂತಿದ್ದುದರಿಂದ ಮನೆಯ ಹೊರಗಿದ್ದ ಮಂಚದ ಮೇಲೆ ಕುಳಿತು ನಾವು ಹಿರಿಯರನ್ನು ಮಾತನಾಡಿಸುತ್ತಿದ್ದೆವು. ಆ ಕಾಲಕ್ಕೆ ನಾವು ಸಂಘದ ವಿಚಾರವಾಗಿ ಮಾತನಾಡಲು ಹೋದಾಗ ಅವರು ವಿರೋಧಿಸ-ದಿದ್ದರೂ ಮಾತನಾಡಲು ಹಿಂಜರಿಯುತ್ತಿದ್ದರು. ಆ ಕಾಲದಲ್ಲಿ ಸರಕಾರಿ ನೌಕರಿಯಲ್ಲಿದ್ದ-ವರಿಗೆ ಆರೆಸ್ಸೆಸ್ ಸಂಪರ್ಕದಿಂದ ತಮ್ಮ ಉದ್ಯೋಗಕ್ಕೆ ತೊಂದರೆ ಉಂಟಾಗಬಹುದೆಂಬ ಒಂದು ರೀತಿಯ ಅಂಜಿಕೆ ಇರುತ್ತಿತ್ತು.

ಅನಂತಕುಮಾರರನ್ನು ನಾನು ಭೇಟಿಯಾಗಿದ್ದು ಅವರು ಏಳು ಅಥವಾ ಎಂಟನೇ ತರಗತಿಯಲ್ಲಿದ್ದಾಗ ಎನ್ನಬಹುದು. ಹನ್ನೊಂದು ವರ್ಷಕ್ಕೇ ಆರೆಸ್ಸೆಸ್ ಸಂಪರ್ಕಕ್ಕೆ ಬಂದಿದ್ದರೂ ಸಂಘದ ಶಾಖೆಗಳಲ್ಲಿ ಅವರ ಹಾಜರಿ ನಿಯಮಿತವಾಗಿರುತ್ತಿತ್ತು ಎಂದು ಹೇಳುವಂತಿಲ್ಲ. ಬಾಲ್ಯದಲ್ಲಿ ಅವರು ತುಂಬ ಚುರುಕು ಮತ್ತು ತುಂಟ ಸ್ವಭಾವದವರಾಗಿದ್ದರು. ಕೆಲವೊಮ್ಮೆ ಶಾಖೆಗೆ ಬಂದರೂ ಶಾಖೆಯ ಚಟುವಟಿಕೆಯನ್ನು ಕೆಡಿಸುತ್ತಿದ್ದುದೂ ಉಂಟು. ಅನಂತ್ ಬಗ್ಗೆ ದೂರುಗಳು ಆಗಾಗ್ಗೆ ಬಂದರೂ ನಾವು ಅವೆಲ್ಲ ಬಾಲ್ಯದ ಸಹಜ ಹುಡುಗಾಟ ಎಂದು ಉಪೇಕ್ಷೆ ಮಾಡುತ್ತಿದ್ದೆವು.

ಆದರೆ ಅನಂತ್ ಪಿಯುಸಿಗೆ ಬಂದ ಮೇಲೆ ನಮಗೆ ಅವರ ನಿಜವಾದ ಬದ್ಧತೆಯ ಪರಿಚಯವಾಯಿತು. ಅವರು ಪಿಯುಸಿಯಲ್ಲಿ ಓದುತ್ತಿದ್ದಾಗ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಯಿತು. ಆ ಸಮಯದಲ್ಲಿ ನಾನು ಎಂಬಿಬಿಎಸ್ ಮುಗಿಸಿ ಸಂಘದ ಪೂರ್ಣಾವಧಿ ಕಾರ್ಯಕರ್ತನಾಗಿದ್ದೆ. ನಾನು ಪ್ರಚಾರಕ ಎನ್ನುವುದಕ್ಕಿಂತ ವಿಸ್ತಾರಕನಾಗಿ ಎರಡು ವರ್ಷ ಕೆಲಸ ಮಾಡಿದ್ದೆ.

ತುರ್ತುಪರಿಸ್ಥಿತಿ ಜೂನ್ 25ಕ್ಕೇ ಘೋಷಣೆಯಾಗಿದ್ದರೂ ಅದರ ವಿರುದ್ಧದ ಹೋರಾಟ ಕಾವು ಪಡೆದುಕೊಳ್ಳಲು ಆರೇಳು ತಿಂಗಳುಗಳೇ ಬೇಕಾಯಿತು. ಮೊದಲಿನ ಕೆಲವು ತಂಡಗಳ ಹೋರಾಟಗಳಿಗೆ ಯಾವುದೇ ಪೂರ್ವತಯಾರಿ ಇರಲಿಲ್ಲ. ಎಲ್ಲರೂ ದೇಶಭಕ್ತಿಯಿಂದ ಪ್ರೇರಿತರಾಗಿ ಭಾವನಾತ್ಮಕವಾಗಿ ಮುಂದೆ ಬರುತ್ತಿದ್ದರು. ಅವರಲ್ಲಿ ವಿದ್ಯಾರ್ಥಿಗಳೇ ಅಧಿಕ ಸಂಖ್ಯೆಯಲ್ಲಿದ್ದರು.

ಆದರೆ ಅಮಾಯಕ ವಿದ್ಯಾರ್ಥಿಗಳ ವಿರುದ್ಧ ದೌರ್ಜನ್ಯಗಳು ನಡೆದಿದ್ದನ್ನು ನಾವು ಕಣ್ಣಾರೆ ನೋಡುತ್ತಿದ್ದೆವು. ವಾದೀಂದ್ರ ಎನ್ನುವ ದಕ್ಷಿಣ ಕನ್ನಡದ ಹುಡುಗ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ. ಅವನ ಚಿಕ್ಕಪ್ಪ ಮತ್ತು ದೊಡ್ಡಪ್ಪ ದೊಡ್ಡ ದೊಡ್ಡ ಹೋಟೆಲುಗಳನ್ನೇ ನಡೆಸುತ್ತಿದ್ದರು. ಅಂದಿನ ಪೋಲೀಸ್ ಅಧಿಕಾರಿ ಕೂಡ ದಕ್ಷಿಣ ಕನ್ನಡದವರೇ. ಅವರು ಈ ಹುಡುಗನನ್ನು ಕರೆಸಿ ತುಳುವಿನಲ್ಲಿ ಚಂದದಿಂದ ಮಾತನಾಡಿದ್ದೇನೋ ಸರಿಯೇ. ನಂತರ ರಾತ್ರಿಯಲ್ಲಿ ಆತನಿಗೂ ಜೊತೆಯಲ್ಲಿದ್ದ ಶ್ರೀಕಾಂತ ದೇಸಾಯಿ ಎಂಬ ಇನ್ನೊಬ್ಬ ಹುಡುಗನಿಗೂ ಎಷ್ಟು ಹೊಡೆದರೆಂದರೆ ಮುಂದೆ ನಾವು ಇತರ ಹುಡುಗರನ್ನು ಸತ್ಯಾಗ್ರಹಕ್ಕೆ ಅಣಿಗೊಳಿಸುವಾಗ ತುಂಬ ಮಾನಸಿಕ ಹಿಂಸೆಯಾಗುತ್ತಿತ್ತು. ಇವರಿಬ್ಬರೂ ಅನಂತಕುಮಾರರಿಗಿಂತ ಚಿಕ್ಕವರು. ಮುಂದಿನ ತಂಡದಲ್ಲಿ ಅನಂತಕುಮಾರ್, ನರಹರಿ ಸೇರಿದಂತೆ ಹದಿನಾಲ್ಕು ವಿದ್ಯಾರ್ಥಿಗಳಿದ್ದರು. ಅನಂತಕುಮಾರರು ಬಳ್ಳಾರಿಯ ಸಬ್ ಜೈಲಿನಲ್ಲಿ ಬಂದಿಯಾಗಿದ್ದಾಗ ನಾವು ಅಲ್ಲಿ ಬಂದಿಗಳಾಗಿದ್ದ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಿದ್ದೆವು. ಜೈಲಿನಲ್ಲಿಯೂ ಅವರೇ ನಾಯಕರು. ಅಲ್ಲಿನ ಎಲ್ಲ ವ್ಯವಸ್ಥೆಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು.



ಸಂಘವು ನಿಷೇಧಿಸಲ್ಪಟ್ಟಿದ್ದರಿಂದ ಕಾರ್ಯಾಲಯದಲ್ಲಿ ಯಾವುದೇ ಚಟುವಟಿಕೆ ನಡೆಸುವ ಹಾಗಿರಲಿಲ್ಲ. ನಾನು ವಾಸವಾಗಿದ್ದ ಇಡೀ ಮನೆಯೇ ರಸ್ತೆಗಿಂತ ಕೆಳಮಟ್ಟದಲ್ಲಿತ್ತು. ಹಾಗಾಗಿ ನಮ್ಮ ಮನೆಯ ತಳಮಹಡಿಯೇ ಎಲ್ಲ ಚಟುವಟಿಕೆಗಳಿಗೆ ನಿಜವಾದ ಭೂಗತ ಕೇಂದ್ರವಾಗಿತ್ತು. ಕರಪತ್ರಗಳನ್ನು ಮುದ್ರಿಸುವ ಸೈಕ್ಲೋಸ್ಟೈಲ್ ಯಂತ್ರ ಮತ್ತು ಅನೇಕ ಪ್ರಚಾರ ಸಾಮಗ್ರಿಗಳು ಅಲ್ಲಿದ್ದವು. ಇಬ್ಬರು ಪ್ರಚಾರಕರ ಜೊತೆಗೆ ಜಿಲ್ಲಾ ಪ್ರಚಾರಕರಾಗಿದ್ದ ಬದರೀನಾಥ್ ಅಲ್ಲಿಯೇ ವಾಸವಾಗಿದ್ದರು. ಬದರೀನಾಥರೇ ಊಟದ ವ್ಯವಸ್ಥೆ ಮಾಡುತ್ತಿದ್ದರು. ಕಾರವಾರದ ಪ್ರಕಾಶ್ ನಾಯಕ್ ಅಲ್ಲಿಯೇ ತಂಗಿದ್ದರು. ಹೊ ವೆ ಶೇಷಾದ್ರಿಯವರೂ ಒಮ್ಮೆ ಅಲ್ಲಿಗೆ ಭೇಟಿ ನೀಡಿದ್ದರು. ಆ ಮನೆಗೆ ಅನಂತಕುಮಾರ್ ಆಗಾಗ ಬರುತ್ತಿದ್ದರು.

ಅನಂತಕುಮಾರ್ ಜೈಲುವಾಸ ಮುಗಿಸಿಕೊಂಡು ಬರುವ ವೇಳೆಗೆ ನಾವು ಕಾರ್ಯಾಲಯವನ್ನು ಬದಲಿಸಿದ್ದೆವು. ಇಷ್ಟೆಲ್ಲ ಕಷ್ಟನಷ್ಟಗಳನ್ನು ಎದುರಿಸಬೇಕಾಗುತ್ತದೆ ಎಂದು ತಿಳಿದ ಮೇಲೂ ಈ ಹುಡುಗನಿಗೆ ಹೆದರಿಕೆಯೇ ಇಲ್ಲವಲ್ಲ ಎಂದು ನನಗೆ ಆಗ ಅನ್ನಿಸುತ್ತಿತ್ತು. ಆ ಮೊದಲು ಅನಂತಕುಮಾರರ ಮನೆಯಲ್ಲಿ ಹೇಳಿಕೊಳ್ಳುವಂತಹ ನಾಯಕರು ಯಾರೂ ಇರಲಿಲ್ಲ. ಅವರ ತಂದೆ ಸಾಮಾನ್ಯ ಮಧ್ಯಮ ವರ್ಗದ ರೈಲ್ವೇ ಉದ್ಯೋಗಿ, ಸಾತ್ವಿಕ ಸ್ವಭಾವದವರು. ತಾಯಿ ತಕ್ಕ ಮಟ್ಟಿಗೆ ಧೈರ್ಯಶಾಲಿಗಳು. ಹಾಗಿದ್ದರೂ ಮಗ ಉತ್ತಮ ನಾಯಕರಾಗಿ ಬೆಳೆದು ಬಂದದ್ದು ಉಲ್ಲೇಖಾರ್ಹ.

ಅನಂತಕುಮಾರರು ಭಾವುಕತೆಗೆ ಒಳಗಾಗುವುದಿದೆ. ಆದರೆ ಅವರು ಹೆದರಿಕೊಂಡು ಸುಮ್ಮನಾದದ್ದನ್ನು ನಾವು ಎಂದೂ ನೋಡಿಲ್ಲ. ಅವರಲ್ಲಿ ಈ ಸಕಾರಾತ್ಮಕ ನಾಯಕತ್ವದ ಲಕ್ಷಣಗಳನ್ನು ನಾವು ಬಾಲ್ಯದಲ್ಲಿಯೇ ಗುರುತಿಸಿದ್ದೆವು. ಅನಂತಕುಮಾರರ ಇಡೀ ತಂಡವೇ ವಿಶೇಷ ವ್ಯಕ್ತಿಗಳಿಂದ ಕೂಡಿತ್ತು. ವಾದೀಂದ್ರ, ಶ್ರೀಕಾಂತ ದೇಸಾಯಿ, ಪ್ರಹ್ಲಾದ ಬಾಡಗಂಡಿ, ಹನುಮಂತ ಇನಾಂದಾರ್, ಮುಂತಾದ ಹಲವು ನಿಷ್ಠಾವಂತ ದೇಶಭಕ್ತರಿಂದ ಕೂಡಿದ್ದ ತಂಡದಲ್ಲಿ, ಅನಂತಕುಮಾರರೇ ಹೀರೋ!




ವಿದ್ಯಾರ್ಥಿ ಪರಿಷತ್ತು ರಾಜ್ಯದ ಎಲ್ಲ ಕಡೆ ವ್ಯಾಪಕವಾಗಿ ಮತ್ತು ವೇಗವಾಗಿ ಬೆಳೆಯಲು ಕಾರಣರಾದವರು ಎಂಪಿ ಕುಮಾರ್, ದತ್ತಾತ್ರೇಯ ಹೊಸಬಾಳೆ, ಪಿ. ವಿ. ಕೃಷ್ಣ ಭಟ್ಟರು ಮುಂತಾದ ಹತ್ತು ಹನ್ನೆರಡು ಮಂದಿ ಮೊದಲ ತಲೆಮಾರಿನ ಕಾರ್ಯಕರ್ತರು. ಇವರು ಶಿವಮೊಗ್ಗದಿಂದ ರಾಜ್ಯದ ಬೇರೆ ಬೇರೆ ಕಡೆ ಪ್ರವಾಸ ಮಾಡಿ ಸಂಘಟನೆ ಮಾಡುತ್ತಿದ್ದರು. ತುರ್ತು ಪರಿಸ್ಥಿತಿಯ ಸಮಯದಲ್ಲಿ ಮುಂದೆ ಬಂದ ಹತ್ತಿಪ್ಪತ್ತು ಇತರರು ಪರಿಷತ್ತಿನ ಆಧಾರಸ್ತಂಭಗಳಾಗಿದ್ದರು.

ವಿದ್ಯಾರ್ಥಿ ಪರಿಷತ್ತಿನ ಪ್ರತಿದಿನದ ಚಟುವಟಿಕೆಗಳನ್ನು ಸಂಘದ ಸದಸ್ಯರೇ ನೋಡಿಕೊಳ್ಳುತ್ತಿದ್ದರು. ಹೀಗೆಯೇ ಮಾಡಿ ಎಂದು ನಿರ್ದೇಶನ ಮಾಡುವವರು ಅಂದು ಯಾರೂ ಇರಲಿಲ್ಲ.

(ಪುಟ 4 ರಲ್ಲಿ ಮುಂದುವರೆದಿದೆ)

# ಸೋತವನು ಕುಸ್ತಿಪಟುವಾದ

**ಅನಂತಯಾನ**
**ಅಧ್ಯಾಯ 3**

ಶ್ರೀ ಅನಂತಕುಮಾರರ ಜೀವನ ಕಥನ
ನಿರೂಪಣೆ : ಟಿ.ಎಸ್. ಗೋಪಾಲ್

ದೇವತಾಸ್ವರೂಪಿಣಿಯಾದ ಅಕ್ಕಯ್ಯಮ್ಮನಂತಹ ಸ್ತ್ರೀಮೂರ್ತಿಯನ್ನು ನಾನು ಕಂಡೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು ಎಂದು ಅಕ್ಕಯ್ಯಮ್ಮನ ಸಮೀಪಬಂಧುವೊಬ್ಬರು ವರ್ಣಿಸಿದುದು ಆಕೆಯ ಅಪೂರ್ವವ್ಯಕ್ತಿತ್ವವನ್ನು ಬಿಂಬಿಸುತ್ತದೆ. ನರಹರಿ ಶಾಸ್ತ್ರಿಗಳ ಪತ್ನಿ ಅಕ್ಕಯ್ಯಮ್ಮ ಸಹನಶೀಲೆ, ದುಡಿಮೆಯನ್ನು ಎಂದೂ ಶ್ರಮವೆಂದು ಪರಿಗಣಿಸದ ನಿಸ್ವಾರ್ಥ ಜೀವಿ. ಮನೆಯವರಾಗಲಿ, ಹೊರಗಿನವರಾಗಲಿ ಯಾರು ಎಷ್ಟೇ ಹೊತ್ತಿಗೆ ಬರಲಿ ಊಟೋಪಚಾರದಿಂದ ಸತ್ಕರಿಸುವ ಅನ್ನಪೂರ್ಣೆ. ಗಂಡನ ಮನೆಯ ಬಿಡುವಿಲ್ಲದ ಕೆಲಸಗಳ ನಡುವೆ ಆಕೆಗೆ ತನ್ನ ತವರಿನ ನೆನಪಾದರೂ ಆಗಿದ್ದೀತೋ ಹೇಗೆ? ಆಗಿನ ಪದ್ಧತಿಯಂತೆ ಚೊಚ್ಚಲ ಬಾಣಂತನದ ನೆಪದಲ್ಲಾದರೂ ಅಕ್ಕಯ್ಯಮ್ಮ ತನ್ನ ತವರಿಗೆ ಹೊರಟರು. ಅದೂ ಮದುವೆಯಾದ ನಾಲ್ಕು ವರ್ಷಗಳ ನಂತರ.


ಅಕ್ಕಯ್ಯಮ್ಮನ ಹಿರಿಯ ಮಗ ನಾರಾಯಣ ಶಾಸ್ತ್ರಿ ಹುಟ್ಟಿದ್ದು ತನ್ನ ತಾಯಿಯ ತವರೂರು ಬಂಡುಕೊಡಗೇನಹಳ್ಳಿಯಲ್ಲಿ. ಮಾರ್ಚ್ ೧೯, ೧೯೩೦ ರಂದು ಜನಿಸಿದ ನಾರಾಯಣಶಾಸ್ತ್ರಿಯ ನಂತರ ಹುಟ್ಟಿದ ಮಕ್ಕಳು ಕೃಷ್ಣಮೂರ್ತಿ(೧೯೩೫) ಮತ್ತು ನಾಗರತ್ನ (೧೯೪೧) ಇಬ್ಬರೂ ಹುಟ್ಟಿದ್ದು ಮೈಸೂರಿನಲ್ಲೇ.

ಆಕಾರ, ಎತ್ತರಗಳಲ್ಲೇನೋ ನಾರಾಯಣ ಶಾಸ್ತ್ರಿ ತಂದೆಯಂತೆಯೇ. ಆದರೆ, ಬಣ್ಣ ಮಾತ್ರ ಕಪ್ಪು. ಅತ್ಯಂತ ಸೌಮ್ಯಸ್ವಭಾವದ ಹುಡುಗ. ಮೇಲುನೋಟಕ್ಕೆ ಗಡುಸಾಗಿ ಕಂಡರೂ ಮಾತು, ಮನಸ್ಸು ತೀರಾ ಮೃದು. ವಾಚಾಳಿತನವಾಗಲಿ, ಯಾರಿಗೂ ನೋವುಂಟುಮಾಡುವ ಕುಹಕವಾಗಲಿ ಆತನಲ್ಲಿ ಕಾಣದು. ದೊಡ್ಡಪ್ಪಂದಿರ ಸಂಸಾರಗಳೂ ಒಟ್ಟಿಗಿದ್ದ ಕುಟುಂಬದಲ್ಲಿ ಮನೆತುಂಬ ಮಕ್ಕಳು, ಬಂಧುಗಳು ಇರುವಲ್ಲಿ ನಾರಾಯಣ ಶಾಸ್ತ್ರಿ ತನ್ನ ನೋವು ನಲಿವುಗಳನ್ನು ಎಂದೂ ಹೇಳಿಕೊಂಡವನೇ ಅಲ್ಲ. ಅಲ್ಲದೆ, ತಾನಾಗಿಯೇ ಮುಂದಾಗಿ ಇಂತಹುದು ಬೇಕೆಂದು ಏನನ್ನೂ ಬಯಸುತ್ತಿರಲಿಲ್ಲ. ಯಾವುದೇ ಸಂದರ್ಭದಲ್ಲೂ ಹಸಿವೆಯೆಂದೋ ತೊಂದರೆಯೆಂದೋ ದೂರಿದವನಲ್ಲ. ತಿಂಡಿಯೋ ತಿನಿಸೋ ಏನೇ ಇರಲಿ, ಉಳಿದವರಿಗೆ ಹಂಚಿಕೆಯಾದ ಮೇಲೆಯೇ ತನ್ನ ಯೋಚನೆ. ತಮ್ಮ, ತಂಗಿಯರು ಹುಟ್ಟಿದ ಮೇಲಂತೂ ಅವರನ್ನು ನಾರಾಯಣ ಶಾಸ್ತ್ರಿ ತುಂಬ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದ.

ಮನೆಗೆ ಸಮೀಪವಿದ್ದ ಲಕ್ಷ್ಮೀಪುರಂ ಮಿಡಲ್ ಸ್ಕೂಲಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದ ನಾರಾಯಣ ಶಾಸ್ತ್ರಿ ಮುಂದಿನ ಶಿಕ್ಷಣಕ್ಕೆ ಸೇರಿದ್ದು ಶಾರದಾ ವಿಲಾಸ ಪ್ರೌಢಶಾಲೆಗೆ. ಮುಂದೆ, ಪಕ್ಕದ ಶಾರದಾವಿಲಾಸ ಕಾಲೇಜಿನಲ್ಲೇ ವ್ಯಾಸಂಗ ಮುಂದುವರಿಸಿ ಇಂಟರ್ ಮೀಡಿಯೇಟ್ ಓದಿದರು. ಅಲ್ಲಿಂದ ಯುವರಾಜಾ ಕಾಲೇಜಿಗೆ ಸೇರಿ ಬಿ.ಎಸ್.ಸಿ. ಪದವಿ ಪಡೆದರು. ಶಾಸ್ತ್ರಿ ಕುಟುಂಬದ ಬಹುತೇಕ ಹಿರಿಯರಂತೆ ಆರಡಿಯ ಎತ್ತರ, ದೇಹಸೌಷ್ಠವಗಳು ನಾರಾಯಣ ಶಾಸ್ತ್ರಿಗೂ ವಂಶಪಾರಂಪರ್ಯವೋ ಎಂಬಂತೆ ಪ್ರಾಪ್ತವಾಗಿದ್ದವು. ದೇಹದಾರ್ಢ್ಯಕ್ಕೆ ತಕ್ಕಂತೆ ಅಂಗಸಾಧನೆ ಮಾಡುವ ಹಂಬಲವೂ ಬೆಳೆದು ಅದೊಂದು ದಿನಚರಿಯ ಭಾಗವೂ ಆಯಿತು.

ಕನ್ನಡನಾಡಿನ ಜನಪ್ರಿಯ ಪಾರಂಪರಿಕ ಕ್ರೀಡೆಗಳಲ್ಲಿ ಕುಸ್ತಿಯೂ ಒಂದು. ಮೈಸೂರು ಮಹಾರಾಜರ ಆಳ್ವಿಕೆಯ ಕಾಲದಲ್ಲಿ ಕುಸ್ತಿಕಲೆಗೆ ವಿಶೇಷ ಪ್ರೋತ್ಸಾಹವಿದ್ದಿತು. ನಾಡಹಬ್ಬ ದಸರೆಯ ಸಂದರ್ಭದ ಚಟುವಟಿಕೆಗಳಲ್ಲಿ ಕುಸ್ತಿಪಂದ್ಯಗಳು ಜನಾಕರ್ಷಣೆಯ ವಿಶೇಷ ಕೇಂದ್ರಗಳೆನಿಸಿದ್ದುವು. ಅರಸರ ಆಳ್ವಿಕೆಯಿದ್ದ ೨೦ ನೇ ಶತಮಾನದ ಪೂರ್ವಾರ್ಧದಲ್ಲೂ ಕುಸ್ತಿಯ ಕ್ರೀಡೆ ಪಾರಂಪರಿಕ ಮಹತ್ತ್ವವನ್ನು ಉಳಿಸಿಕೊಂಡಿತ್ತು. ಹೀಗಾಗಿ ಕುಸ್ತಿಕಲೆಯು ಈ ಪ್ರಾಂತ್ಯದ ಯುವಪೀಳಿಗೆಯನ್ನು ಆಕರ್ಷಿಸುತ್ತಿದ್ದುದರಲ್ಲಿ ಅಚ್ಚರಿಯಿಲ್ಲ. ಇನ್ನು ವ್ಯಾಯಾಮ, ಅಂಗಸಾಧನೆ ಮಾಡುತ್ತಿದ್ದವರು, ದೇಹದಾರ್ಢ್ಯದಲ್ಲಿ ಆಸಕ್ತಿವಹಿಸಿದ ಯುವಕರು ಕುಸ್ತಿಯ ಪಟ್ಟುಗಳನ್ನು ಕಲಿಯಲು ಮನಸ್ಸು ಮಾಡುವುದರಲ್ಲಿ ವಿಶೇಷವೇನು?

ನಾರಾಯಣ ಶಾಸ್ತ್ರಿಯ ಗೆಳೆಯರ ಬಳಗ ದೊಡ್ಡದೇ. ಗೋವಿಂದರಾವ್, ಲಕ್ಷ್ಮೀನಾರಾಯಣ, ರಂಗನಾಥ ಬಲ್ಲಾಳ್, ವೈದ್ಯನಾಥ, ರಾಮಕೃಷ್ಣ, ಸೀತಾರಾಮು, ರಾಮನಾಥ ಮೊದಲಾದವರು. ಈ ಗೆಳೆಯರಲ್ಲಿ ಇದ್ದ ಹಲವು ಸಮಾನ ಆಸಕ್ತಿಗಳಲ್ಲಿ ಅಂಗಸಾಧನೆಯೂ ಒಂದು. ಶಾರದಾ ವಿಲಾಸ್ ಶಾಲೆಯ ಆವರಣದಲ್ಲೇ ವ್ಯಾಯಾಮ ಮಾಡುತ್ತಿದ್ದ ಹುಡುಗರಿಗೆ ಕುಸ್ತಿ



ತರಬೇತು ಪಡೆಯಲು ಗರಡಿಮನೆಯ ಸೌಲಭ್ಯ ಅವಶ್ಯಕವಾಗಿತ್ತು. ಶಾಲೆಯ ಮೈದಾನದ ಒಂದು ಭಾಗದಲ್ಲೇ ಮಟ್ಟಿ ಹಾಕಿಸಿ ಗರಡಿಮನೆಯ ವ್ಯವಸ್ಥೆ ಮಾಡಿಕೊಡಬೇಕೆಂದು ನಾರಾಯಣ ಶಾಸ್ತ್ರಿಯೂ ಅವರ ಗೆಳೆಯರೂ ಶಾಲೆಯ ಮುಖ್ಯಸ್ಥರನ್ನು ಕೇಳಿಕೊಂಡರು.

ಆಗಿನ ಮುಖ್ಯೋಪಾಧ್ಯಾಯರಾಗಿದ್ದ ರಾಮಸ್ವಾಮಿಯವರು ಈ ಹುಡುಗರ ಆಸಕ್ತಿಯನ್ನು ತತ್ಪೂರ್ವದಿಂದಲೇ ಗಮನಿಸಿ ಮೆಚ್ಚಿಕೊಂಡಿದ್ದರು. ಗರಡಿಮನೆಗಾಗಿ ಹುಡುಗರ ಬೇಡಿಕೆಯನ್ನು ಕೂಡಲೇ ಒಪ್ಪಿಕೊಂಡು ಅದಕ್ಕಾಗಿ ಟ್ರೈಪ್ ರೈಟಿಂಗ್

(ಪುಟ 12 ರಲ್ಲಿ ಮುಂದುವರೆದಿದೆ)

## ಅನಂತ ಪ್ರೇರಣೆ

ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿಯಿಂದ ಅನಂತಕುಮಾರ್ ಜೀ ಅವರೊಂದಿಗೆ ನನ್ನ ಒಡನಾಟದ ನೆನಪು ಬಂದಿತು. ಕೇಂದ್ರದಲ್ಲಿ ಛಾಯಾಚಿತ್ರ, ವಿಡಿಯೋ ನೋಡಿದರೆ ದೆಹಲಿ, ಗುವಾಹಾಟಿ ಹಾಗೂ ಬೆಂಗಳೂರಿನ ಕೆಲ ಘಟನೆಗಳು ನೆನಪಾಗುತ್ತವೆ. ಪ್ರೇರಣಾ ಕೇಂದ್ರವು ಯುವಸಮುದಾಯಕ್ಕೆ ಮಾದರಿ.

**- ಅನಿಲ್ ಸಹಸ್ರಬುದ್ಧೆ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ (AICTE) ಅಧ್ಯಕ್ಷರು.**

ರಾಷ್ಟ್ರ ಕಂಡ ಧೀಮಂತ ವ್ಯಕ್ತಿಯಾದ ಸಮಾಜದ ಬಗ್ಗೆ ಅತ್ಯಂತ ಕಳಕಳಿ ಇಟ್ಟುಕೊಂಡಿದ್ದ ವಸುಧೈವ ಕುಟುಂಬಕಂ, ವಂದೇ ಮಾತರಂ, ಅನ್ನ-ಅಕ್ಷರ-ಆರೋಗ್ಯ, ಹಸಿರಿಗಾಗಿ ಒಂದು ದಿನ, ಪ್ಲಾಸ್ಟಿಕ್ ಮುಕ್ತ ಸಮಾಜ, ಜನೌಷಧಿ, ಬೇವು ಲೇಪಿತ ಯೂರಿಯಾ ಹೀಗೆ ಅನೇಕ ಜನಪ್ರಿಯ ಯೋಜನೆಗಳ ರೂವಾರಿಯಾದ ದಿ. ಅನಂತಕುಮಾರರ ಜೀವನ ಮುಂದಿನ ಜನರಿಗೆ ಪ್ರೇರಣೆ ಹಾಗೂ ಸ್ಫೂರ್ತಿದಾಯಕ. ಇಂತಹ ಪ್ರೇರಣಾ ಕಾರ್ಯಗಳನ್ನು ಮುಂದುವರಿಸುತ್ತಿರುವ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ದೇವರು ಇನ್ನಷ್ಟು ಶಕ್ತಿ ದಯಪಾಲಿಸಲಿ ಎಂದು ಬಯಸುತ್ತೇನೆ.

**- ರಬಿಯಾದವ್ ಟಿ, ಶಿಕ್ಷಕರು, ಶ್ರೀ ಶಾರದಾ ಪೀಠ ಹೈಸ್ಕೂಲ್, ಬ್ಯಾಟರಾಯನಪುರ.**

# ವಿಜ್ಞಾನಿಗಳಿಗೆ ಅನಂತಕುಮಾರ್ ಬೆಂಬಲ

**ಪದ್ಮಶ್ರೀ ಡಾ. ಕೋಟಾ ಹರಿನಾರಾಯಣ್**

ನನ್ನ ಮತ್ತು ಅನಂತಕುಮಾರ್ ನಡುವಣ ಸಂಬಂಧ 30 ವರ್ಷಗಳಿಗಿಂತ ಹಳೆಯದು. ಅವರು ತೇಜಸ್ವಿನಿಯವರನ್ನು ಮದುವೆಯಾದ ಮೇಲೆ ಇದು ಇನ್ನೂ ಗಾಢವಾಯಿತು. ತೇಜಸ್ವಿನಿಯವರು ನಮ್ಮ ಎಡಿಎ (ಏರೋನಾಟಿಕಲ್ ಡೆವಲಪ್ಮೆಂಟ್ ಏಜನ್ಸಿ) ಯಲ್ಲಿ ಹೆಸರು ಗಳಿಸಿದ ವಿಜ್ಞಾನಿಯಾಗಿದ್ದರು. ತೇಜಸ್ ಲಘು ಯುದ್ಧ ವಿಮಾನದ ವಿನ್ಯಾಸ ಮತ್ತು ಅಭಿವೃದ್ಧಿಯಲ್ಲಿ ಅವರು ಮಹತ್ವದ ಪಾತ್ರ ವಹಿಸಿದ್ದರು. ಉತ್ತಮ ಕರ್ತವ್ಯನಿಷ್ಠೆ ಹೊಂದಿದ ವಿಜ್ಞಾನಿಗಳ ಪರಿಶ್ರಮದಿಂದ ಇಂದು ತೇಜಸ್ ಸಂಪೂರ್ಣ ಯಶಸ್ವಿಯಾಗಿ ಹಾರಾಟ ನಡೆಸುತ್ತಿದೆ. ಅಮೆರಿಕ, ಆಸ್ಟ್ರೇಲಿಯಾ, ಮಲೇಶಿಯಾ, ಈಜಿಪ್ಟ್ ಮುಂತಾದ ದೇಶಗಳು ತೇಜಸ್ ಯುದ್ಧವಿಮಾನಗಳನ್ನು ಖರೀದಿಸಲು ಆಸಕ್ತಿ ತೋರಿಸಿವೆ.

ಲಘು ಯುದ್ಧ ವಿಮಾನದ ಯೋಜನೆಯ ಒಂದು ಹಂತದಲ್ಲಿ ನಾವು ಸಾಕಷ್ಟು ಕಟು ಟೀಕೆಗಳನ್ನು ಎದುರಿಸಬೇಕಾಯಿತು. ಆಗ ನಾನು ಅನಂತಕುಮಾರರನ್ನು ಭೇಟಿಯಾಗಿ ಯೋಜನೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದ್ದೆ. ನಮ್ಮ ಮೇಲೆ ವಿಶ್ವಾಸವಿರಿಸಿ ನಮ್ಮ ಕರಡು ವಿನ್ಯಾಸವನ್ನು ಅರ್ಥಮಾಡಿಕೊಂಡು ಅನಂತಕುಮಾರ್ ನಮ್ಮ ಬೆಂಬಲಕ್ಕೆ ನಿಂತು ನಮ್ಮಲ್ಲಿ ಆತ್ಮವಿಶ್ವಾಸ ತುಂಬಿದರು. ನಮಗೆ ಬೇಕಾಗಿದ್ದ ಎಲ್ಲ ರೀತಿಯ ಸಹಾಯವನ್ನೂ ಒದಗಿಸಿದರು. ಅವರ ಬೆಂಬಲ ಮತ್ತು ನಮ್ಮ ವಿಜ್ಞಾನಿಗಳ ಕಠಿಣ ಪರಿಶ್ರಮದಿಂದ ಯೋಜನೆ ಯಶಸ್ವಿಯಾಯಿತು. ಇಂದು ಎರಡು ಸ್ಕ್ವಾಡ್ರನ್ ವಿಮಾನಗಳು ವಾಯುದಳವನ್ನು ಸೇರಿಕೊಂಡಿವೆ. ವಿಮಾನ ಚಾಲಕರು ಹಾಗೂ ವಾಯುದಳದ ಮುಖ್ಯಸ್ಥರು ಈ ವಿಮಾನಗಳ ಕಾರ್ಯಕ್ಷಮತೆಯ ಬಗ್ಗೆ ಸಂತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಇಂದು ನಮ್ಮ ಸಂಸ್ಥೆಗೆ ಜಾಗತಿಕ ಮನ್ನಣೆ ದೊರೆತಿದೆ. ರಕ್ಷಣಾ ಕ್ಷೇತ್ರದಲ್ಲಿ ನಾವು ಆಮದಿನ ಮೇಲೆ ಶೇ ನೂರರಷ್ಟು ಅವಲಂಬಿತರಾಗಿದ್ದೇವೆ ಎಂಬ ಕಲಂಕವನ್ನು ತೊಡೆದು ಹಾಕಿ ನಿರ್ಯಾತ ಮಾಡುವವರ ಪಟ್ಟಿಗೆ ಸೇರಿಕೊಂಡಿದ್ದೇವೆ.

ಅನಂತಕುಮಾರರು ಎಂದೂ ನಮಗೆ ಭೇಟಿಯನ್ನು ನಿರಾಕರಿಸಲಿಲ್ಲ. ಅವರ ದೆಹಲಿ ಮನೆಯಲ್ಲಿ ನಾವು ಊಟ, ತಿಂಡಿಗಳ ಆತಿಥ್ಯವನ್ನು ಸವಿಯುವುದರ ಜೊತೆಗೆ ಅತ್ಯಂತ ಸೂಕ್ಷ್ಮ ವಿಷಯಗಳೂ ಸೇರಿದಂತೆ ಎಲ್ಲ ವಿಷಯಗಳ ಬಗ್ಗೆಯೂ ತಾಸುಗಟ್ಟಲೆ ಚರ್ಚಿಸುತ್ತಿದ್ದೆವು. ನಮ್ಮ ಯೋಜನೆಗೆ ಅವರು ನೇರವಾಗಿ ಹಾಗೂ ಪರೋಕ್ಷವಾಗಿ ಸಹಾಯ ಮಾಡಿದ್ದಾರೆ. ಅನಂತಕುಮಾರರು ಎಡಿಎ ಸಂಸ್ಥೆಯ ಅಳಿಯ ಎಂದು ನಾವು ಹೇಳುತ್ತಿದ್ದೆವು. ಅವರೂ ಅದನ್ನು ಕೇಳಿ ಸಂತಸ ಪಟ್ಟಿದ್ದರು.



ಅನಂತಕುಮಾರರು ನೀಡಿದ ಅಖಂಡ ಪ್ರೋತ್ಸಾಹವನ್ನು ಎಡಿಎ ಸಂಸ್ಥೆಯ ಹಿರಿಯ ಅಧಿಕಾರಿಗಳು ಎಂದಿಗೂ ಮರೆಯಲಾರರು. ಅಂದಿನ ಪ್ರಧಾನಮಂತ್ರಿ, ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಲಘು ಯುದ್ಧವಿಮಾನಕ್ಕೆ ತೇಜಸ್ ಎಂದು ಹೆಸರಿಡುವ ವೇಳೆ ಅನಂತಕುಮಾರ್ ಹಾಜರಿದ್ದರು. ಆಗ ಅವರು ಕೇಂದ್ರ ಸರಕಾರದಲ್ಲಿ ನಾಗರಿಕ ವಾಯುಯಾನ ಸಚಿವರಾಗಿದ್ದರು. ಅವರು ಮಾನವ ಸಂಪನ್ಮೂಲಗಳ ಬಗ್ಗೆ ತೋರಿಸಿದಷ್ಟೇ ಆಸಕ್ತಿಯನ್ನು ತಂತ್ರಜ್ಞಾನದ ಬಗ್ಗೆಯೂ ತೋರಿಸುತ್ತಿದ್ದರು. ಇದು ಅವರಲ್ಲಿದ್ದ ವಿಶಿಷ್ಟವಾದ ಗುಣ. ಅವರೊಡನೆ ಒಂದು ಗಂಟೆ ಮಾತನಾಡಿದರೆ ಸಮಸ್ಯೆಗಳನ್ನು ಬಗೆಹರಿಸುವ ಉಪಾಯಗಳ ಬಗ್ಗೆ ನಮಗೆ ಉತ್ತಮ ತರಬೇತಿ ದೊರೆಯುತ್ತಿತ್ತು. ಸಮಸ್ಯೆ ಬಗೆಹರಿಯಲಿ, ಇಲ್ಲದಿರಲಿ, ಪ್ರಯತ್ನವನ್ನಂತೂ ಮಾಡೋಣ ಎಂಬ ಇತ್ಯಾತ್ಮಕ ನಿಲುವು ಅವರದಾಗಿತ್ತು.

ಅಂತಹ ಧೀಮಂತ ನಾಯಕ ಅನಂತಕುಮಾರರ ಸಾಧನೆಗಳನ್ನು ದಾಖಲಿಸುತ್ತ ಮುಂದಿನ ಪೀಳಿಗೆಗೆ ಪರಿಚಯಿಸಲು ಅನಂತಕುಮಾರ್ ಪ್ರತಿಷ್ಠಾನವು ಅನಂತಕುಮಾರ್ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಇದರ ೨೬ನೆಯ ಸಂಚಿಕೆಯನ್ನು ಬಿಡುಗಡೆ ಮಾಡಲು ನನಗೆ ಹೆಮ್ಮೆ ಎನಿಸುತ್ತದೆ.

ಪುಟ 2 ರಿಂದ

# ಬೆಳೆಯುವ ಸಿರಿ ಮೊಳಕೆಯಲ್ಲಿ

ಹುಬ್ಬಳ್ಳಿಯ ವಿದ್ಯಾನಗರದಲ್ಲಿ ಆಗ ಅನೇಕ ಖಾಸಗಿ ವಿದ್ಯಾರ್ಥಿನಿಲಯಗಳಿದ್ದವು. ಶಿರಸಿ, ಕಾರವಾರ, ಬೆಳಗಾವಿ ಜಿಲ್ಲೆ ಮುಂತಾದ ಪ್ರದೇಶಗಳ ವಿದ್ಯಾರ್ಥಿಗಳು ಆ ಹಾಸ್ಟೆಲುಗಳಲ್ಲಿ ವಾಸವಾಗಿದ್ದರು. ಶೇ 80 ರಷ್ಟು ವಿದ್ಯಾರ್ಥಿಗಳು ವಿದ್ಯಾನಗರದಲ್ಲಿಯೇ ಸಿಗುತ್ತಿದ್ದರು. ವಿದ್ಯಾರ್ಥಿಗಳನ್ನು ಪರಿಷತ್ತಿನ ಕಾರ್ಯಗಳಲ್ಲಿ ತೊಡಗಿಸುವ ಎಲ್ಲ ಚಟುವಟಿಕೆಗಳಿಗೆ ಅನಂತಕುಮಾರ್ ಮತ್ತು ಅಚ್ಯುತ ಲಿಮಯೆ ಸಮನ್ವಯಕಾರರಾಗಿದ್ದರು. ಪಿಯುಸಿಗೆ ಬರುವಾಗಲೇ ಅವರು ಉತ್ತಮ ನಾಯಕರಾಗಿ ರೂಪುಗೊಂಡಿದ್ದರು. ಅವರು ಪದವಿ ವಿದ್ಯಾಭ್ಯಾಸ ಮುಗಿಸಿಕೊಂಡು ಬೆಂಗಳೂರಿಗೆ ಹೋದರು. ನಾನು ಮುಂಬಯಿಗೆ ತೆರಳಿ ಅಲ್ಲಿಂದ 1982 ರಲ್ಲಿ ಬೆಂಗಳೂರಿಗೆ ಬಂದೆ. ಅನಂತಕುಮಾರ್ ಆಗ ಅಭಾವಿಪದ ಪೂರ್ಣಾವಧಿ ಕಾರ್ಯಕರ್ತರಾಗಿದ್ದರು. ಅವರು ಬೆಂಗಳೂರಿನಲ್ಲಿ ಎಲ್ ಎಲ್ ಬಿ ಮುಗಿಸಿದರು. ನಾನು, ನರಹರಿ ಫಡ್ಕೆ ಮತ್ತು ಅನಂತಕುಮಾರ್, ಮೂವರೂ ಬೆಂಗಳೂರಿಗೆ ಬಂದು ಬಿಜೆಪಿಯ ಚಟುವಟಿಕೆಗಳನ್ನು ಪ್ರಾರಂಭಿಸಿದೆವು.

ಜನಸಂಘವನ್ನು ಕಟ್ಟಿ ಬೆಳೆಸಬೇಕೆಂಬ ಹಂಬಲ ನಮಗಿತ್ತು. ಆ ಸಂದರ್ಭದಲ್ಲಿ ಕೇವಲ ಇಬ್ಬರು ಮೂವರು ನಾಯಕರು ಮಾತ್ರ ಪಕ್ಷದಲ್ಲಿ ಸಕ್ರಿಯರಾಗಿದ್ದರು. ಹೀಗಿರುವಾಗ ಬೇರೆ ಬೇರೆ ಪ್ರದೇಶಗಳ ಹೊಸಪೀಳಿಗೆಯ ನಾಯಕರು ಮುಂದೆ ಬರಬೇಕೆಂದು ನಾವು ಬಯಸಿದ್ದೆವು. ಸಂಘರ್ಷಕ್ಕೆ ಸಿದ್ಧರಾಗಿರುವ ಹೊಸಪೀಳಿಗೆಯ ತರುಣರಿಗೆ ಸಹಜವಾಗಿಯೇ ಧೈರ್ಯ, ಉತ್ಸಾಹಗಳಿರುತ್ತವೆ. ಅವರು ತಮ್ಮ ಧೈರ್ಯವನ್ನು ತ್ಯಾಗಕ್ಕಾಗಿ ಬಳಸುತ್ತಾರೆ. ಅಂಥವರು ಸಮಾಜಕ್ಕೆ ಉಪಯುಕ್ತ ಕೆಲಸಗಳನ್ನು ಮಾಡುತ್ತಾರೆ ಎಂದು ನಾವು ನಂಬಿದ್ದೆವು. ಸಾಂದರ್ಭಿಕವಾದ, ಜಾತಿ ಆಧಾರಿತ ನಾಯಕತ್ವದಲ್ಲಿ ಸತ್ವವಿರುವುದಿಲ್ಲ, ಅಂಥವರಿಂದ ಸಶಕ್ತ ಸಂಘರ್ಷಗಳು ಅಸಾಧ್ಯ. ಒಮ್ಮೆ ನಾವು ವಿಧಾನಸೌಧ ಚಲೋ ಕಾರ್ಯಕ್ರಮ ಹಮ್ಮಿಕೊಂಡಿದ್ದೆವು.

ಅನಂತಕುಮಾರರೇ ನಮ್ಮ ನಾಯಕರು. ಆಗ ಜೀಪಿನಲ್ಲಿ ವಿಧಾನಸೌಧದ ಬಳಿ ಬಂದ ಅನಂತಕುಮಾರರಿಗೆ ಪೋಲೀಸರು ಎಷ್ಟು ಹೊಡೆದರೆಂದರೆ, ಅವರಿಗೆ ಗಾಯಗಳಾಗಿ ರಕ್ತ ಸುರಿದು ಅವರು ಧರಿಸಿದ್ದ ಬಿಳಿಬಟ್ಟೆ ರಕ್ತಸಿಕ್ತವಾಯಿತು. ವಿಧಾನ ಸೌಧದ ಎದುರಿಗಿದ್ದ ದೊಡ್ಡ ಮರದ ಕೆಳಗೆ ಅನಂತಕುಮಾರರ ಮೇಲೆ ಲಾಠಿ ಪ್ರಹಾರ ಮಾಡಿದ್ದರು. ಎಲ್ಲರೂ ಹೆದರಿಬಿಟ್ಟಿದ್ದರು. ಆದರೆ ಅನಂತಕುಮಾರರು ಸುರಿಯುತ್ತಿದ್ದ ರಕ್ತವನ್ನು ಲೆಕ್ಕಿಸದೆ, "ಆ ಕಡೆಯಿಂದ ನಡೆಯಿರಿ, ವಿಧಾನ ಸೌಧಕ್ಕೆ ನುಗ್ಗಿರಿ" ಎಂದು ಎತ್ತರದ ದನಿಯಲ್ಲಿ ಜನರನ್ನು ಹುರಿದುಂಬಿಸುತ್ತಿದ್ದರು. ಸಾಮಾನ್ಯ ಕಾರ್ಯಕರ್ತರು ಹೊಡೆಸಿಕೊಳ್ಳುವುದು, ನಾಯಕರು ಕಾರು ಹತ್ತಿ ನಡೆಯುವುದು ಸಾಮಾನ್ಯ. ಆದರೆ ಅನಂತಕುಮಾರ್ ಆ ರೀತಿ ವರ್ತಿಸಲಿಲ್ಲ. ತಾವೇ ಮುಂದೆ ನಿಂತು ಲಾಠಿಗೆ ಎದೆ ಕೊಟ್ಟರು. ಅದು ಅವರ ದೊಡ್ಡ ಗುಣ. ಆಗ ಅನಂತಕುಮಾರರು ಯಾವುದೇ ಅಧಿಕಾರದಲ್ಲಿರಲಿಲ್ಲವೆಂಬುದನ್ನೂ ಗಮನಿಸಬೇಕು.

ಇನ್ನೊಮ್ಮೆ ಬಳ್ಳಾರಿ ಜಿಲ್ಲೆಯ ಉಪಚುನಾವಣೆಯ ಸಂದರ್ಭ. ಅಲ್ಲಿ ಚುನಾವಣೆಯ ಪೂರ್ವಭಾವಿ ಸಭೆ ನಡೆದಿತ್ತು. ಅಲ್ಲಿ ಪ್ರಭಾವಿಗಳಾಗಿದ್ದ ಎರಡು ಮೂರು ಜನ ಅಲ್ಲಿ ಸೇರಿದ್ದ ಎಲ್ಲರನ್ನೂ ಬ್ಲಾಕ್ ಮೇಲ್ ಮಾಡುವ ರೀತಿಯಲ್ಲಿ ವರ್ತಿಸುತ್ತಿದ್ದರು. ಯಡಿಯೂರಪ್ಪನವರೂ ಉದ್ವಿಗ್ನರಾಗಿ ಕುಳಿತಿದ್ದರು. ಆಗ ಪ್ರವೇಶಿಸಿದ ಅನಂತಕುಮಾರರು ಪರಿಸ್ಥಿತಿಯನ್ನು ಹೇಗೆ ನಿಯಂತ್ರಿಸಿದರೆಂದರೆ, ಬಳಸಿದ ಮಾತು, ತಂತ್ರಗಳನ್ನು ನೋಡಿ ರೆಡ್ಡಿ ಸಹೋದರರು ತಮ್ಮ ನೆಲೆಯಲ್ಲಿಯೇ ತತ್ತರಿಸಿ ಹೋಗಿದ್ದರು. ಹಾಗೆ ನೋಡಿದರೆ ಅಲ್ಲಿ ನೆರೆದಿದ್ದವರಲ್ಲಿ ಅನಂತಕುಮಾರರೇ ಕಿರಿಯರು.

ಅನಂತಕುಮಾರರ ಬಾಲ್ಯವನ್ನು, ವಿದ್ಯಾರ್ಥಿ ದಿನಗಳನ್ನು ಹತ್ತಿರದಿಂದ ನೋಡಿದ್ದ ನಮಗೆ ಅವರು ರಾಷ್ಟ್ರಮಟ್ಟದ ನಾಯಕರಾಗಿ ಬೆಳೆದದ್ದು ಸಹಜವಾಗಿಯೇ ಕಾಣಿಸಿತ್ತು. ಬೆಳೆವ ಸಿರಿಯನ್ನು ಮೊಳಕೆಯಲ್ಲಿಯೇ ಕಂಡವರು ನಾವು!

ಪುಟ 1 ರಿಂದ

# ಪರಿಷತ್ತಿನಲ್ಲಿ ಅನಂತ ನಾಯಕತ್ವ


ನನ್ನ ಜೀವನದ ಒಂದು ಉದಾಹರಣೆಯನ್ನೇ ಕೊಡುತ್ತೇನೆ. ಎಂಭತ್ತರ ದಶಕದ ಪ್ರಾರಂಭದಲ್ಲಿ ಹುಬ್ಬಳ್ಳಿ ಮತ್ತು ಬೆಂಗಳೂರು ನಗರಗಳಲ್ಲಿ ದೊಡ್ಡ ದೊಡ್ಡ ಅಶ್ಲೀಲ ಭಿತ್ತಿಪತ್ರಗಳು ಕಾಣಿಸಿಕೊಳ್ಳುತ್ತಿದ್ದವು. ಈ ಪ್ರವೃತ್ತಿಯ ವಿರುದ್ಧ ಅಲ್ಲೊಂದು ಇಲ್ಲೊಂದು ಕ್ಷೀಣ ದನಿ ಕೇಳಿಸಿದ್ದು ಬಿಟ್ಟರೆ ಯಾರೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಇದನ್ನು ಪ್ರತಿಭಟಿಸಲು ಮುಂದಾದವರು ಅನಂತಕುಮಾರ್. ನಮ್ಮಲ್ಲೇ ಏಳೆಂಟು ಹುಡುಗಿಯರನ್ನು ಕರೆದು ಸಭೆ ಸೇರಿಸಿದರು. “ನೀವು ಹುಡುಗಿಯರಾಗಿ ಯಾಕೆ ಹೀಗೆ ಸುಮ್ಮನೆ ಕುಳಿತುಕೊಂಡಿದ್ದೀರಿ? ಇವತ್ತು ನಿಮ್ಮ ಊರಿನ ಸರ್ಕಲ್ಲಿನಲ್ಲಿ ಅಶ್ಲೀಲ ಭಿತ್ತಿಪತ್ರ ಕಾಣಿಸಿಕೊಂಡಿದೆ, ನಾಳೆ ನಿಮ್ಮ ಕಾಲೇಜಿನ ಎದುರಿಗೇ ಕಾಣಿಸಿಕೊಳ್ಳುತ್ತದೆ. ಆಗ ನೀವು ತಲೆಯೆತ್ತಿ ಓಡಾಡುವುದು ಸಾಧ್ಯವೇ? ಇದನ್ನು ನೀವು ಈಗಲೇ ಪ್ರತಿಭಟಿಸಬೇಕು” ಎಂದು ಸುಮಾರು ಅರ್ಧ ಗಂಟೆ ನಮ್ಮನ್ನುದ್ದೇಶಿಸಿ ಮಾತನಾಡಿದ್ದರು. ಪ್ರತಿಯೊಂದು ಕಾಲೇಜಿನಿಂದ ಸುಮಾರು 50 ಹುಡುಗಿಯರನ್ನು ತರಗತಿಗಳಿಂದ ಬಿಡಿಸಿ ಕರೆತರಬೇಕು, ಇಂತಿಂಥವರನ್ನು ಮಾತನಾಡಲು ಕರೆಸುವುದು ಸೂಕ್ತ ಎಂಬಿವೇ ಮೊದಲಾಗಿ ಪ್ರತಿಭಟನೆಯ ಸಂಪೂರ್ಣ ರೂಪುರೇಷೆಯನ್ನು ಅವರೇ ನಿರ್ಧರಿಸಿದ್ದರು. ಆಂದೋಲನಕ್ಕೆ ನಿಗದಿಯಾದ ದಿವಸ ಅವರು “ನಿಮ್ಮ ಪ್ರಾಂಶುಪಾಲರನ್ನು ಭೇಟಿಯಾಗಿ ಕಾಲೇಜನ್ನು ಮುಚ್ಚಿ ನಮಗೆ ಚಳವಳಿಯಲ್ಲಿ ಭಾಗವಹಿಸಲು ಅನುವು ಮಾಡಿಕೊಡಿ ಎಂದು ಮನವಿ ಮಾಡಿಕೊಳ್ಳಿ, ಅವರು ಒಪ್ಪದಿದ್ದರೆ ನೀವೇ ಬೆಲ್‌ಬಾರಿಸಿ ವಿದ್ಯಾರ್ಥಿನಿಯರನ್ನು ತರಗತಿಗಳಿಂದ ಹೊರಗೆ ಕರೆತಂದು ಚಳವಳಿಯನ್ನು ಮಾಡಿ” ಎಂದು ಹೇಳಿದ್ದು ಇಂದಿಗೂ ನನ್ನ ಕಿವಿಯಲ್ಲಿ ಅನುರಣಿಸುತ್ತಿದೆ. ಹೆಣ್ಣುಮಕ್ಕಳ ಪಾಲಿಟೆಕ್ನಿಕ್ಕಿನ ಎಲ್ಲಾ ವಿದ್ಯಾರ್ಥಿನಿಯರೂ ಅನಂತಕುಮಾರರ ಮಾತುಗಳಿಂದ ಪ್ರೇರಿತರಾಗಿ ಚಳವಳಿಯಲ್ಲಿ ಭಾಗವಹಿಸಿದರು. ಇತರ ಕಾಲೇಜುಗಳ ಶೇ. ತೊಂಭತ್ತರಷ್ಟು ವಿದ್ಯಾರ್ಥಿನಿಯರೂ ನಮ್ಮ ಜೊತೆ ಸೇರಿಕೊಂಡರು. ಮೂರುಸಾವಿರ ಮಠದ ಆವರಣದಲ್ಲಿ ನಡೆದ ಪ್ರತಿಭಟನೆಯಲ್ಲಿ ನಾವು ಸುಮಾರು ಐನೂರು ಜನ ವಿದ್ಯಾರ್ಥಿನಿಯರು ಭಾಗವಹಿಸಿದ್ದೆವು ಎಂದು ನೆನೆಸಿಕೊಂಡರೆ ಇಂದಿಗೂ ರೋಮಾಂಚನವಾಗುತ್ತದೆ.

ಇದೇ ರೀತಿಯಲ್ಲಿ ನಾವು ಕೈಗೆತ್ತಿಕೊಂಡ ಇನ್ನೊಂದು ಸಾಮಾಜಿಕ ಸಮಸ್ಯೆ, ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯ ಬೆತ್ತಲೆಸೇವೆಯ ಪಿಡುಗು. ಇಂತಹ ಸಾಮಾಜಿಕ ಪಿಡುಗುಗಳ ಬಗ್ಗೆಯೂ ವಿದ್ಯಾರ್ಥಿಗಳು ಧ್ವನಿಯೆತ್ತಬೇಕು ಎಂದು ಭಾವಿಸಿದ ವಿದ್ಯಾರ್ಥಿ ಪರಿಷತ್ತು ಕೃಷ್ಣಭಟ್ಟರ ನೇತೃತ್ವದಲ್ಲಿ ಒಂದು ದೊಡ್ಡ ಮಟ್ಟದ ಚಳವಳಿಯನ್ನೇ ರೂಪಿಸಿತು.

ಕೇವಲ ವಿಶ್ವವಿದ್ಯಾಲಯಗಳ ಸಮಸ್ಯೆಗಳನ್ನಷ್ಟೇ ಅಲ್ಲದೆ ಅನೇಕ ರಾಷ್ಟ್ರೀಯ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆಯೂ ವಿದ್ಯಾರ್ಥಿ ಪರಿಷತ್ತು ಹೋರಾಟ ನಡೆಸಿತು. ಪ್ರತಿಯೊಂದು ಹೋರಾಟವನ್ನೂ ಸುವ್ಯವಸ್ಥಿತವಾಗಿ ಯೋಜಿಸಲಾಗುತ್ತಿತ್ತು. ಹೋರಾಟದ ಪ್ರತಿಯೊಂದು ವಿವರವೂ ಪತ್ರಿಕೆಗಳಲ್ಲಿ ಪ್ರಕಟವಾಗಿ ಜನರಿಗೆ ಮಾಹಿತಿ ತಲುಪಿ ಜನರು ಈ ಕುರಿತು ಚರ್ಚಿಸುವಂತಾಗಬೇಕು ಎಂದು ಅನಂತಕುಮಾರ್ ಹೇಳುತ್ತಿದ್ದರು.

ರಾಷ್ಟ್ರನಿರ್ಮಾಣದಲ್ಲಿ ಯುವಜನತೆಯ ಪಾತ್ರ ಮಹತ್ತ್ವದ್ದು. ಎಲ್ಲ ವಿದ್ಯಾರ್ಥಿಗಳೂ ದೇಶಕಟ್ಟುವ ಕೆಲಸದಲ್ಲಿ ಭಾಗವಹಿಸಬೇಕೆಂದು ಅನಂತಕುಮಾರ್ ಕರೆ ನೀಡುತ್ತಿದ್ದರು. ಈ ನಿಟ್ಟಿನಲ್ಲಿ ಅವರು ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿದರು. ಉದಾಹರಣೆಗೆ, ಜನವರಿ ಹನ್ನೆರಡು. ಅಂದು, ಯುವಜನತೆಯಲ್ಲಿ ರಾಷ್ಟ್ರಾಭಿಮಾನವನ್ನು ಬಡಿದೆಬ್ಬಿಸಿದ ವಿವೇಕಾನಂದರ ಜನ್ಮದಿನ. ಆ ದಿನವನ್ನು ರಾಷ್ಟ್ರನಿರ್ಮಾಣದ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಆಚರಿಸಬೇಕೆಂದು ನಿರ್ಧರಿಸಲಾಗಿತ್ತು. ಹೋರಾಟಗಳೆಲ್ಲ ತಾತ್ಕಾಲಿಕ, ರಾಷ್ಟ್ರ ನಿರ್ಮಾಣದ ಕಾರ್ಯ ನಿರಂತರ ಎಂದು ಅನಂತಕುಮಾರ್ ಹೇಳುತ್ತಿದ್ದರು. ಹೀಗಾಗಿ, ವಿವೇಕಾನಂದರ ಜಯಂತಿಯನ್ನು ಎಲ್ಲ ಎಬಿವಿಪಿ ಶಾಖೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ರಚನಾತ್ಮಕವಾಗಿ ಆಚರಿಸಬೇಕೆಂದು ನಿರ್ಧರಿಸಲಾಗಿತ್ತು. ವ್ಯಕ್ತಿತ್ವ ವಿಕಸನ, ಸಿಇಟಿ ತರಬೇತಿ ಮುಂತಾದ ಕಾರ್ಯಕ್ರಮಗಳು ರಚನಾತ್ಮಕ ಕಾರ್ಯಕ್ರಮಗಳ ಪಟ್ಟಿಯಲ್ಲಿ ಸೇರಿಕೊಂಡಿದ್ದವು. ಈ ಎಲ್ಲ ಕಾರ್ಯಕ್ರಮಗಳಿಗೆ ಆಯಾ ಶಾಖೆಗಳೇ ಧನಸಂಗ್ರಹ ಮಾಡಿಕೊಳ್ಳಬೇಕಿತ್ತು.

ತಮ್ಮ ಖಾಸಗಿ ಖರ್ಚು ವೆಚ್ಚಗಳ ವಿಚಾರದಲ್ಲಿಯೂ ಅನಂತಕುಮಾರ್ ಶಿಸ್ತನ್ನು ಪಾಲಿಸಿಕೊಂಡು ಬಂದಿದ್ದರು. ಪ್ರತಿದಿನ ಲೆಕ್ಕ ಬರೆದಿಡುವುದನ್ನು ರೂಢಿ ಮಾಡಿಕೊಂಡಿದ್ದರು. ಲೆಕ್ಕಪತ್ರಗಳನ್ನು ಒಪ್ಪಿಸುವುದು ಸಂಘಟನೆಯ ಪ್ರಮುಖ ಜವಾಬ್ದಾರಿ ಎಂದು ಅವರು ಯಾವಾಗಲೂ ಹೇಳುತ್ತಿದ್ದರು.



ಅನಂತಕುಮಾರರು ಹೋರಾಟಗಳಿಗೆ ನೀಡಿದಷ್ಟೇ ಮಹತ್ವವನ್ನು ಸಂಘಟನೆಗೂ ನೀಡಿದರು. ಈ ದಿಸೆಯಲ್ಲಿ ನಡೆಯುತ್ತಿದ್ದ ಅಭ್ಯಾಸವರ್ಗಗಳು ಗಮನಾರ್ಹವಾಗಿದ್ದವು. ಪ್ರತಿವರ್ಷದ ಪ್ರಾರಂಭದಲ್ಲಿ ಎರಡು ಮೂರು ದಿನಗಳ ನಗರ ಅಭ್ಯಾಸ ವರ್ಗ, ಜಿಲ್ಲಾ ಮಟ್ಟದ ಅಭ್ಯಾಸ ವರ್ಗ ಮತ್ತು ರಾಜ್ಯ ಮಟ್ಟದ ಅಭ್ಯಾಸವರ್ಗಗಳು ನಡೆಯುತ್ತಿದ್ದವು. ಅವು ವಸತಿಸಹಿತವಾಗಿರುತ್ತಿದ್ದವು. ನಾನು ಈ ಎಲ್ಲಾ ಅಭ್ಯಾಸವರ್ಗಗಳಲ್ಲಿ ಭಾಗವಹಿಸಿದ್ದೆ. ಅವುಗಳಲ್ಲಿ ವಿದ್ಯಾರ್ಥಿಪರಿಷತ್ತಿನ ಉದ್ದೇಶಗಳು ಸದಸ್ಯರ ಜವಾಬ್ದಾರಿಗಳು, ಕಾರ್ಯವೈಖರಿ ಮುಂತಾದ ವಿಷಯಗಳ ಬಗ್ಗೆ ಪ್ರಶ್ನೋತ್ತರ ಕಾರ್ಯಕ್ರಮಗಳು ನಡೆಯುತ್ತಿದ್ದವು. ಸ್ಥಳೀಯ ಸಮಸ್ಯೆಗಳ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಈ ಕಾರ್ಯಕ್ರಮಗಳಲ್ಲಿ ಕೃಷ್ಣಭಟ್ಟರು, ವಿಷ್ಣುಕಾಂತ್, ದತ್ತಾತ್ರೇಯ ಹೊಸಬಾಳೆ, ಅನಂತಕುಮಾರ್ ಮೊದಲಾದ ರಾಜ್ಯಮಟ್ಟದ ನಾಯಕರು ಭಾಗವಹಿಸುತ್ತಿದ್ದರು. ಅವರೆಲ್ಲ ಹಿಂದಿನ ಸಾಲಿನಲ್ಲಿ ಕುಳಿತು ನಮಗೆ ಅಭ್ಯಾಸವರ್ಗಗಳನ್ನು ನಡೆಸುವ ಜವಾಬ್ದಾರಿಯನ್ನು ವಹಿಸುತ್ತಿದ್ದರು. ಒಂದು ಕಾರ್ಯಾಲಯವನ್ನು ನಡೆಸುವ ಬಗೆ, ಕಾರ್ಯಕ್ರಮಗಳನ್ನು ನಡೆಸುವ ರೀತಿ ಮೊದಲಾದ ವಿಷಯಗಳ ಬಗ್ಗೆ ನಾವೇ ಭಾಷಣ ಮಾಡುವಷ್ಟು ಪರಿಣತರಾಗಿದ್ದೆವು. ಇದು ಅನಂತಕುಮಾರರು ಸಾಮಾನ್ಯ ಕಾರ್ಯಕರ್ತರನ್ನು ನಾಯಕರನ್ನಾಗಿ ಬೆಳೆಸಿದ ರೀತಿ.

ಸಂಘಟನೆಯ ಅಭ್ಯಾಸ ವರ್ಗಗಳಲ್ಲಿ ಟೀಮ್ ಎಂಬ ಪರಿಕಲ್ಪನೆಯನ್ನು ಪ್ರಾರಂಭಿಸಿದ್ದರು. ಪ್ರತಿಯೊಂದು ಊರಿನಲ್ಲಿ ಒಂದು ಟೀಮ್ ಇರುತ್ತಿತ್ತು. ಪ್ರಮುಖ ಕಾರ್ಯಕರ್ತರು ಒಟ್ಟಿಗೆ ಕುಳಿತುಕೊಂಡು ಚರ್ಚೆ ಮಾಡುವುದು, ಕಾರ್ಯಕ್ರಮಗಳನ್ನು ರೂಪಿಸುವುದು, ವಾರಕ್ಕೊಮ್ಮೆ ಅಧ್ಯಯನ ಬೈಠಕ್ ನಡೆಸುವುದು, ಕಾರ್ಯಾಲಯಗಳನ್ನು ನಡೆಸುವುದು ಈ ಟೀಮಿನ ಜವಾಬ್ದಾರಿ. ಅನೇಕ ಊರುಗಳಲ್ಲಿ ಕಾರ್ಯಾಲಯಗಳಿರುತ್ತಿರಲಿಲ್ಲ. ಕಾರ್ಯಕರ್ತರು ತಮ್ಮ ಮನೆಗಳಿಂದಲೇ ಕಾರ್ಯಾಲಯಗಳನ್ನು ನಡೆಸುತ್ತಿದ್ದರು. ಪ್ರತಿಯೊಂದು ಕಾಲೇಜಿನಿಂದ ಕನಿಷ್ಠ ನೂರು ಜನರಾದರೂ ಪರಿಷತ್ತಿನ ಸದಸ್ಯರಾಗಬೇಕೆಂದು ಗುರಿ ನಿಗದಿಯಾಗಿತ್ತು. ಸದಸ್ಯತ್ವ ಶುಲ್ಕ ಒಂದು ರೂಪಾಯಿ. ಸದಸ್ಯತ್ವಕ್ಕಿಂತ ಪ್ರತಿಯೊಬ್ಬ ವಿದ್ಯಾರ್ಥಿಯೂ ವಿದ್ಯಾರ್ಥಿ ಪರಿಷತ್ತಿನ ಬಗ್ಗೆ ತಿಳುವಳಿಕೆ ಹೊಂದಿರುವುದು ಮುಖ್ಯವಾಗಿತ್ತು.

ಈ ಎಲ್ಲ ಚಟುವಟಿಕೆಗಳ ಹಿನ್ನೆಲೆಯಲ್ಲಿ ಅನಂತಕುಮಾರರು ನಿರಂತರವಾಗಿ ಪ್ರವಾಸದಲ್ಲಿರುತ್ತಿದ್ದರು. ಪರೀಕ್ಷೆ ನಡೆಯುತ್ತಿದ್ದ ಮೂರು ನಾಲ್ಕು ದಿನಗಳನ್ನು ಬಿಟ್ಟರೆ ರಜಾದಿನಗಳನ್ನೂ ಸೇರಿಸಿಕೊಂಡು ಬಿಡುವಿಲ್ಲದಂತೆ ಸಂಘಟನೆಯ ಕೆಲಸದಲ್ಲಿ ಅವರು ತೊಡಗಿಕೊಂಡರು.

ಈ ಸಂದರ್ಭದಲ್ಲಿ ಒಂದು ವಿಶೇಷ ಘಟನೆ ನನ್ನ ನೆನಪಿಗೆ ಬರುತ್ತಿದೆ. ಅನಂತಕುಮಾರ್ ಪರಿಷತ್ತಿನ ರಾಜ್ಯ ಕಾರ್ಯದರ್ಶಿಯಾಗಿದ್ದಾಗ ಕಾನೂನು ವ್ಯಾಸಂಗ ಮಾಡುತ್ತಿದ್ದರು. ಓದುತ್ತಿರುವಾಗಲೇ ರಾಜ್ಯ ಕಾರ್ಯದರ್ಶಿಯಾದ ಮೊದಲ ವ್ಯಕ್ತಿ ಅವರು. ಆಗ ಪರಿಷತ್ತಿನ ಯಾವುದೋ ಒಂದು ಕಾರ್ಯಕ್ರಮದಲ್ಲಿ ಅನಂತಕುಮಾರರು ಮಾತನಾಡುವವರಿದ್ದರು. ತಮ್ಮ ಶಿಸ್ತಿಗಾಗಿ ಇಡೀ ಹುಬ್ಬಳ್ಳಿಯಲ್ಲಿ ಹೆಸರಾಗಿದ್ದ ಗೋಣಿ ಸರ್ ಎನ್ನುವ ಉಪನ್ಯಾಸಕರು ಇನ್ನೊಬ್ಬ ಅತಿಥಿಯಾಗಿ ಬರಬೇಕಿತ್ತು.

ಪುಟ 6 ರಲ್ಲಿ ಮುಂದುವರೆದಿದೆ

ಹಿಂದಿನ ಪುಟದಿಂದ

ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಅವರಿಗೆ ತಲುಪಿಸಲು ಪರಿಷತ್ತಿನ ಕಾರ್ಯಕರ್ತರು ಅಳುಕುತ್ತಲೇ ಅವರ ಬಳಿ ಹೋಗಿದ್ದರು. ಗೋಣಿಯವರು ಅವರ ಹತ್ತಿರ ಕಾರ್ಯಕ್ರಮದಲ್ಲಿ ಬೇರೆ ಯಾರು ಮಾತನಾಡಲಿದ್ದಾರೆ ಎಂದು ಕೇಳಿದರು. ಕಾರ್ಯಕರ್ತರು ಅಂಜುತ್ತಲೇ "ಅನಂತಕುಮಾರ್ ಮಾತನಾಡುತ್ತಾರೆ ಸರ್, ಅವರೂ ನಿಮ್ಮ ಶಿಷ್ಯರೇ, ನಿಮ್ಮ ಕಾಲೇಜಿನ ವಿದ್ಯಾರ್ಥಿ" ಎಂದು ಹೇಳಿದರು. ಗೋಣಿಯವರು ಗಂಭೀರರಾಗಿ "ಅವನು ನನ್ನ ಶಿಷ್ಯನಲ್ಲ" ಎಂದು ಬಿಟ್ಟರು! ಕಾರ್ಯಕರ್ತರಿಗೆ ದಿಗ್ಭ್ರಮೆಯಾದಂತಾಯಿತು. "ಗೋಣಿಯವರಿಗೆ ಅಸಮಾಧಾನವಾಗಿದೆ, ಇನ್ನು ನಮ್ಮ ಕಾರ್ಯಕ್ರಮ ಕೆಟ್ಟಂತೆಯೇ" ಎಂದು ನಿರಾಶೆಯೂ ಉಂಟಾಯಿತು. ಆದರೆ ಮರುಕ್ಷಣದಲ್ಲಿ ಗೋಣಿಯವರು "ಅವನು ನನ್ನ ಶಿಷ್ಯನಲ್ಲ, ನನ್ನ ಗುರು. ನಾನು ಕಾರ್ಯಕ್ರಮಕ್ಕೆ ಬರುತ್ತೇನೆ" ಎಂದು ಹೇಳಿದಾಗ ಕಾರ್ಯಕರ್ತರಿಗೆ ಹೋದ ಜೀವ ಮರಳಿ ಬಂದಂತಾಗಿತ್ತು. ಗೋಣಿ ಸರ್ ಅವರಂತಹ ಶಿಕ್ಷಕರೇ ಗೌರವಿಸಿದ ವ್ಯಕ್ತಿತ್ವ ಅನಂತಕುಮಾರರದು. ಕರ್ನಾಟಕದ ಪ್ರತಿಯೊಬ್ಬ ಉತ್ತಮ ಶಿಕ್ಷಕರ ಪರಿಚಯ ಅವರಿಗಿತ್ತು. ಬೇರೆ ಬೇರೆ ಊರುಗಳಿಗೆ ಹೋದಾಗ ಅವರ ಮನೆಗಳಿಗೆ ಭೇಟಿ ನೀಡಿ ಅವರನ್ನು ಮಾತನಾಡಿಸಿ ಬರುತ್ತಿದ್ದರು. ಈ ರೀತಿಯಾದ ಸಂಪರ್ಕ ಅಭಿಯಾನವನ್ನು ಅವರು ನಿರಂತರವಾಗಿ ನಡೆಸಿಕೊಂಡು ಬಂದರು.

ರಾಜ್ಯ ಮಟ್ಟದ ಅಭ್ಯಾಸ ವರ್ಗಗಳಲ್ಲಿ ರಾಜ್ಯದ ಬೇರೆಬೇರೆ ಭಾಗಗಳಿಂದ ಬಂದ ಕಾರ್ಯಕರ್ತರು ಭಾಗವಹಿಸುತ್ತಿದ್ದರು. ಇವರಲ್ಲಿ ಅನೇಕ ಹೆಣ್ಣುಮಕ್ಕಳೂ ಇರುತ್ತಿದ್ದರು. ಆದರೆ ಒಟ್ಟಾರೆ ಭಾಗವಹಿಸುವವರ ಸಂಖ್ಯೆ ಒಂದು ನೂರಕ್ಕಿಂತ ಹೆಚ್ಚಿರುತ್ತಿರಲಿಲ್ಲ. ಅಭ್ಯಾಸ ವರ್ಗಗಳಲ್ಲಿ ಹೆಚ್ಚು ಜನ ಭಾಗವಹಿಸುವುದರಿಂದ ಉದ್ದೇಶ ಸಾಧನೆಯಾಗುವುದಿಲ್ಲ ಎಂದು ಅನಂತಕುಮಾರ್ ಹೇಳುತ್ತಿದ್ದರು.

ಇನ್ನೊಂದು ಪ್ರಮುಖ ಚಟುವಟಿಕೆ, ಸಮ್ಮೇಳನಗಳನ್ನು ಆಯೋಜಿಸುವುದು. ವರ್ಷಕ್ಕೊಮ್ಮೆ ರಾಜ್ಯ ಮಟ್ಟದ ದೊಡ್ಡ ದೊಡ್ಡ ಸಮ್ಮೇಳನಗಳು ನಡೆಯುತ್ತಿದ್ದವು. ಮೈಸೂರು, ದಾವಣಗೆರೆ ಮುಂತಾದ ಅನೇಕ ಕಡೆಗಳಲ್ಲಿ ಸಮ್ಮೇಳನಗಳು ನಡೆದವು. ಒಂದು ಸಮ್ಮೇಳನವೆಂದರೆ ಧನ ಸಂಗ್ರಹದಿಂದ ಹಿಡಿದು ಗಣ್ಯವ್ಯಕ್ತಿಗಳನ್ನು ಆಹ್ವಾನಿಸುವುದು ಮುಂತಾದ ಸುಮಾರು ಒಂದೂವರೆ ತಿಂಗಳ ಕೆಲಸ! ಇವನ್ನೆಲ್ಲ ಅನಂತಕುಮಾರ್ ಅವರನ್ನೊಳಗೊಂಡ ಕಾರ್ಯಕರ್ತರ ತಂಡ ಯಶಸ್ವಿಯಾಗಿ ನಿಭಾಯಿಸುತ್ತಿತ್ತು.

ತಾಂತ್ರಿಕ ಶಿಕ್ಷಣ ಕ್ಷೇತ್ರದ ಸಮಸ್ಯೆಗಳನ್ನು ಮಾತ್ರವಲ್ಲದೆ ವೈದ್ಯಕೀಯ ಕ್ಷೇತ್ರದ ಸಮಸ್ಯೆಗಳ ಬಗ್ಗೆಯೂ ಅವರು ಹೋರಾಟ ನಡೆಸಿದ್ದರು. ಅನಂತಕುಮಾರರಿಗೆ ಸಾಮಾನ್ಯವಾಗಿ ಅನೇಕ ವೈದ್ಯಕೀಯ ಪಾರಿಭಾಷಿಕ ಶಬ್ದಗಳೂ ಗೊತ್ತಿದ್ದವು. ಇದೆಲ್ಲ ನಿಮಗೆ ಹೇಗೆ ತಿಳಿಯಿತು ಎಂದು ನಾನು ಕೇಳಿದಾಗ ಅವರು ಹುಬ್ಬಳ್ಳಿಯ ಕಿಮ್ಸ್ ವೈದ್ಯಕೀಯ ಕಾಲೇಜಿನ ಹಾಸ್ಟೆಲಿನಲ್ಲಿ ಎರಡು ತಿಂಗಳು ವಾಸವಾಗಿದ್ದೆ. ಆಗ ಅಲ್ಲಿನ ವಿದ್ಯಾರ್ಥಿಗಳು ಮತ್ತು ಶಿಕ್ಷಕ ವರ್ಗದ ಜೊತೆ ಸಂಪರ್ಕದಲ್ಲಿದ್ದೆ. ಹೀಗಾಗಿ ನನಗೆ ವೈದ್ಯಕೀಯ ಪರಿಭಾಷೆಯ ಪರಿಚಯವಾಯಿತು ಎಂದಿದ್ದರು.

ಅನಂತಕುಮಾರರು ಅಧ್ಯಯನ ಶೀಲರಾಗಿದ್ದರು. ಎಲ್ಲಿಗಾದರೂ ಪ್ರವಾಸ ಮಾಡುವಾಗ ಎರಡು ಪುಸ್ತಕಗಳನ್ನು ಕೊಂಡೊಯ್ಯುತ್ತಿದ್ದರು. ಒಂದು ಪ್ರಯಾಣದಲ್ಲಿ ಹೋಗುವಾಗ ಓದುವುದಕ್ಕೆ, ಇನ್ನೊಂದು ಬರುವಾಗ ಓದುವುದಕ್ಕೆ! ಅಪ್ಪಾಜಿ ರಾವ್ ಎಂಬ ಗೋಕಾಕದ ಮಿತ್ರರೊಬ್ಬರು ಅನಂತಕುಮಾರರ ಈ ಸ್ವಭಾವವನ್ನು ಸ್ವಾರಸ್ಯಕರವಾಗಿ ಹಂಚಿಕೊಳ್ಳುತ್ತಾರೆ. ಅನಂತಕುಮಾರರ ಪರಿಚಯವಾಗುವ ವರೆಗೆ ಅವರಿಗೆ ಓದುವ ಅಭ್ಯಾಸವೇ ಇರಲಿಲ್ಲವಂತೆ. ಅನಂತಕುಮಾರರು ಗೋಕಾಕಕ್ಕೆ ಸುಮಾರು ಎರಡು ತಿಂಗಳಿಗೊಮ್ಮೆ ಬರುತ್ತಿದ್ದರು. ಹಾಗೆ ಬಂದಾಗ ಅಪ್ಪಾಜಿಯವರ ಮನೆಯಲ್ಲಿಯೇ ಉಳಿದುಕೊಳ್ಳುತ್ತಿದ್ದರು. ಅನಂತಕುಮಾರರು ಓದಲು ತರುತ್ತಿದ್ದ ಪುಸ್ತಕಗಳ ಹೆಸರುಗಳನ್ನು ಅಪ್ಪಾಜಿಯವರು ಒಂದೆಡೆ ಬರೆದಿಟ್ಟುಕೊಂಡು ನಂತರ ಅವುಗಳನ್ನು ಖರೀದಿಸಿ ಅವರು ಓದುತ್ತಿದ್ದರಂತೆ. ಈ ರೀತಿಯಾಗಿ ತಮ್ಮಲ್ಲಿ ಸಾಹಿತ್ಯದ ಅಭಿರುಚಿ ಬೆಳೆಯಿತು ಎಂದು ಅವರು ನೆನಪಿಸಿಕೊಳ್ಳುತ್ತಾರೆ. ಈ ರೀತಿಯಾಗಿ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಅನೇಕರ ಮೇಲೆ ಅನಂತಕುಮಾರ್ ಪ್ರಭಾವ ಬೀರಿದ್ದರು. ಅವರ ಕೈಯಲ್ಲಿ ದುಡ್ಡು ಕಾಸು ಇಲ್ಲದಿದ್ದರೂ ದುಡ್ಡಿರುವ ಮಿತ್ರರ ಮೂಲಕ ಪುಸ್ತಕಗಳನ್ನು ಖರೀದಿಸಿ ಇತರರಿಗೆ ಉಡುಗೊರೆ ನೀಡುತ್ತಿದ್ದರು. ಇದೂ ನಾಯಕತ್ವವನ್ನು ರೂಪಿಸುವ ಅವರ ಕಾರ್ಯಕ್ರಮದ ಭಾಗವೇ ಆಗಿತ್ತು.

ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳಲ್ಲಿ ಕರಾಳ ಪತ್ರದ ಪಾತ್ರ ಮಹತ್ವದ್ದಾಗಿದೆ. ಸತ್ಯಸಂಗತಿಯ ದರ್ಶನಕ್ಕೆ ಶ್ವೇತಪತ್ರ ಹೊರಡಿಸುವ ವಿಚಾರ ಎಲ್ಲರಿಗೂ ಗೊತ್ತಿದೆ. ಆದರೆ ಅನಂತಕುಮಾರರು ಶಿಕ್ಷಣ ಕ್ಷೇತ್ರದಲ್ಲಿದ್ದ ಲೋಪದೋಷಗಳನ್ನು ಪಟ್ಟಿ ಮಾಡಿ ಒಂದು ಕರಾಳ ಪತ್ರವನ್ನು ಪ್ರಕಟಿಸಿದರು. ಈ ಕರಾಳ ಪತ್ರವನ್ನು ಅನಂತಕುಮಾರರೇ ಸಿದ್ಧಪಡಿಸಿದ್ದರು ಎಂದು ಬೇಳೂರು ಸುದರ್ಶನ ನೆನಪಿಸಿಕೊಳ್ಳುತ್ತಾರೆ. ಎರಡು ದಿನಗಳ ಶ್ರಮದಿಂದ ಪ್ರಕಟವಾದ ಈ ಕರಾಳ ಪತ್ರವನ್ನು ಪ್ರಸಿದ್ಧ ಸಾಹಿತಿ ಮತ್ತು ಪತ್ರಕರ್ತ ಶ್ರೀ ಪಿ ಲಂಕೇಶರು ತಮ್ಮ ಲಂಕೇಶ್‌ಪತ್ರಿಕೆಯ ಮುಖಪುಟದಲ್ಲಿ ಪ್ರಕಟಿಸಿದರು. ಇದರಿಂದ ಪರಿಷತ್ತಿನ ಕಾರ್ಯಕರ್ತರಿಗೆ ಹೊಸ ಹುಮ್ಮಸ್ಸು ಬಂದಿತ್ತು. ಎಡಪಂಥೀಯ ಸಂಘಟನೆಗೆ ಸೇರಿದ ವಿದ್ಯಾರ್ಥಿಗಳೂ ಪರಿಷತ್ತನ್ನು ಗೌರವಿಸುವಂತಾಯಿತು. ಈ ಕರಾಳ ಪತ್ರದ ವಿಷಯಗಳನ್ನು ಎ. ಕೆ ಸುಬ್ಬಯ್ಯ ಮತ್ತಿತರರು ವಿಧಾನಸಭೆಯಲ್ಲಿಯೂ ಪ್ರಸ್ತಾಪಿಸಿದರು. ಈ ರೀತಿಯಾಗಿ, ವಿದ್ಯಾರ್ಥಿ ಪರಿಷತ್ತಿನ ಹೋರಾಟಗಳಿಗೆ ಒಂದು ಪ್ರಮುಖ ತಿರುವನ್ನು ಆ ಕರಾಳ ಪತ್ರ ನೀಡಿತು.

ಅನಂತಕುಮಾರರು ನಿರ್ಣಯಗಳ ಕರಡು ತಯಾರಿಸುವ ಕೆಲಸದಲ್ಲಿ ಸಿದ್ಧಹಸ್ತರು. ಅವರ ಬರವಣಿಗೆ ದೋಷರಹಿತವಾಗಿರುತ್ತಿತ್ತು. ಅವರ ಬರಹಗಳು "ಪದವಿಟ್ಟಳುಪದೊಂದಗ್ಗಳಿಕೆ" ಎಂಬಂತಿರುತ್ತಿದ್ದವು. ಅನಂತಕುಮಾರರ ಬರಹಗಳಲ್ಲಿ ಕರಡು ಪ್ರತಿ, ಉತ್ತಮಪ್ರತಿ, ಅಂತಿಮ ಪ್ರತಿ ಎಂಬ ಭೇದಗಳಿರುತ್ತಿರಲಿಲ್ಲ. ಒಮ್ಮೆ ಪೆನ್ನು ಕಾಗದ ಹಿಡಿದುಕೊಂಡರೆಂದರೆ ಸರಸರನೆ ತಪ್ಪಿಲ್ಲದಂತೆ ಬರೆದುಕೊಂಡು ಹೋಗುತ್ತಿದ್ದರು. ಇದನ್ನು ದತ್ತಾಜಿಯವರೂ ಹೇಳುತ್ತಾರೆ. ಇದಕ್ಕೊಂದು ಮಾದರಿಯಾಗಿ, ಅನಂತಕುಮಾರರ ಪತ್ರವೊಂದನ್ನು ಪ್ರೇರಣಾಕೇಂದ್ರದ ಸಂಗ್ರಹಾಲಯದಲ್ಲಿ ಇರಿಸಿದ್ದೇವೆ. ಅಮೇರಿಕಾ ಮತ್ತು ಭಾರತೀಯ ಜೀವನ ಶೈಲಿಗಳನ್ನು ಹೋಲಿಸಿ ಬರೆದ ನಾಲ್ಕು ಪುಟಗಳ ಆ ಪತ್ರವನ್ನು ಆಸಕ್ತರು ಗಮನಿಸಬಹುದು.

ಅನಂತಕುಮಾರರು ತಮ್ಮ ಕಾರ್ಯಕರ್ತರ ಜೊತೆಗೆ ತುಂಬ ಸರಳವಾಗಿರುತ್ತಿದ್ದರು. ಅವರ ಮನೆಗಳಿಗೆ ಹೋದಾಗ ಅವರ ಅಡುಗೆ ಮನೆಗಳಿಗೆ ನುಗ್ಗಿ ಊಟ ತಿಂಡಿಗಳನ್ನು ಅವರೇ ಹುಡುಕಿಕೊಳ್ಳುತ್ತಿದ್ದರು. ಈ ಸರಳತೆಯ ಜೊತೆಗೆ ಕಾರ್ಯಕರ್ತರನ್ನು ಗುರುತಿಸಿ ಅವರನ್ನು ಹೆಚ್ಚಿನ ಚಟುವಟಿಕೆಗಳಲ್ಲಿ ತೊಡಗಿಸುವುದು ಮತ್ತು ಹಿರಿಯರ ಜೊತೆ ಸಂವಾದ ಮಾಡುವುದು ಅವರ ಅಭ್ಯಾಸವಾಗಿತ್ತು. ಅನಂತಕುಮಾರರು ಶಿರಸಿಗೆ ಹೋದಾಗ ಅವರನ್ನು ಮನೆಗೆ ಕರೆತರಲು ತಮ್ಮ ಸ್ಕೂಟರನ್ನೇ ತೆಗೆದುಕೊಂಡು ಹೋಗುವಂತೆ ತಮ್ಮ ತಂದೆ ಹೇಳುತ್ತಿದ್ದರು ಎಂದು ವಿಶ್ವೇಶ್ವರ ಹೆಗಡೆ ಕಾಗೇರಿಯವರು ಹೇಳುತ್ತಾರೆ. ಹೀಗೆ ಹಿರಿಯರಿಂದಲೇ ಗೌರವಿಸಲ್ಪಡುತ್ತಿದ್ದ ವ್ಯಕ್ತಿ, ಅನಂತಕುಮಾರ್. ಅನಂತಕುಮಾರ್‌ಮನೆಗೆ ಬಂದರೆ ಹಬ್ಬದ ವಾತಾವರಣ ನಿರ್ಮಾಣವಾಗುತ್ತಿತ್ತು ಎಂದು ದತ್ತಾತ್ರೇಯ ಹೊಸಬಾಳೆಯವರ ಅಣ್ಣ ಹೇಳುತ್ತಾರೆ. ನಿರಂತರ ಪ್ರವಾಸಿಯಾಗಿರುತ್ತಿದ್ದ ಅನಂತಕುಮಾರರ ಬರವನ್ನು ಅಪೇಕ್ಷಿಸಿ ಆದರವನ್ನು ತೋರುತ್ತಿದ್ದ ಆತ್ಮೀಯರ ಮನೆಗಳು ಕರ್ನಾಟಕದ ಪ್ರತಿಯೊಂದು ಊರಿನಲ್ಲಿಯೂ ಇದ್ದುವೆಂದರೆ ಅದು ಅತಿಶಯೋಕ್ತಿಯಲ್ಲ. "ವಸುಧೈವ ಕುಟುಂಬಕಂ" ಎಂಬ ಸೂಕ್ತಿಗೆ ಅನಂತಕುಮಾರ್ ಅಕ್ಷರಶಃ ನಿದರ್ಶನವಾಗಿದ್ದರು.



ದೇಗುಲದರ್ಶನ ಮಾಲಿಕೆ - 14


# ದಾವಣಗೆರೆ ಜಿಲ್ಲೆಯ ಕೆಲವು ದೇವಾಲಯಗಳು (ಭಾಗ 2)

ದೇಗುಲ ದರ್ಶನ ಮಾಲಿಕೆಯ ಈ ತಿಂಗಳ ಕಾರ್ಯಕ್ರಮದಲ್ಲಿ ದಾವಣಗೆರೆ ಜಿಲ್ಲೆಯ ಇನ್ನೂ ಹಲವು ಪುರಾತನ ದೇವಾಲಯಗಳನ್ನು ಪರಿಚಯಮಾಡಿಕೊಳ್ಳೋಣ.



ಮೊದಲಿಗೆ ಜಿಲ್ಲೆಯ ಪ್ರಮುಖ ಕೇಂದ್ರಗಳಲ್ಲೊಂದಾದ ಹರಿಹರ. ತುಂಗಭದ್ರಾ ನದಿಯ ದಡದ ಮೇಲಿನ ಈ ಕೈಗಾರಿಕಾ ಪಟ್ಟಣದಲ್ಲಿರುವ ಹರಿಹರೇಶ್ವರ ದೇವಾಲಯ ಹೊಯ್ಸಳರ ಕಾಲದ (ಸಾಮಾನ್ಯ ಶಕ 1224) ಭವ್ಯವಾದ ನಿರ್ಮಿತಿಯಾಗಿದೆ. ಶಿವ-ವಿಷ್ಣು ಈರ್ವರೂ ಏಕೀಭವಿಸಿದಂತೆ ಕಲ್ಪಿಸಿದ ಭವ್ಯವಾದ ವಿಗ್ರಹ ಕಣ್ಮನಗಳನ್ನು ತುಂಬುತ್ತದೆ. ದೇವಾಲಯದ ಮಂಟಪದಲ್ಲಿರುವ ತಿರುಗಣೆಯ ಕಂಬಗಳಂತೂ ಹೊಯ್ಸಳ ಶೈಲಿಯ ವೈಭವಕ್ಕೆ ಸಾಕ್ಷಿಯಾಗಿವೆ.

ಹರಿಹರದಿಂದ ಹತ್ತು ಕಿಮೀ ದೂರ ಹೊಸಪೇಟೆ ರಸ್ತೆಯಲ್ಲಿ ಕ್ರಮಿಸಿ ಗ್ರಾಮೀಣ ರಸ್ತೆಯಲ್ಲಿ ಚಲಿಸಿದರೆ ಸಾರಥಿ ಎಂಬ ಊರನ್ನು ತಲುಪಬಹುದು. ಇಲ್ಲಿ ಕಲ್ಯಾಣ ಚಾಲುಕ್ಯ ಕಾಲದ ಬಸವೇಶ್ವರ ಗುಡಿಯಿದೆ. ಇಲ್ಲಿರುವ ಸೂರ್ಯ, ಮಹಿಷ ಮರ್ದಿನಿ ಮೊದಲಾದ ಹಲವು ಪುರಾತನ ವಿಗ್ರಹಗಳು ದರ್ಶನೀಯವಾಗಿವೆ.





ಹೊಸಪೇಟೆ ರಸ್ತೆಯಲ್ಲಿ ಮುಂದೆ ಆರು ಕಿಮೀ ದೂರ ಚಲಿಸಿದರೆ ನೀಲಗುಂದ ಕ್ರಾಸ್ ತಲುಪುವಿರಿ. ಇಲ್ಲೇ ಸನಿಹದ ನೀಲಗುಂದದಲ್ಲಿ ಭೀಮೇಶ್ವರ ದೇವಾಲಯವಿದೆ. ದೊಡ್ಡ ಕೆರೆಯ ದಡದಲ್ಲಿರುವ ದೇಗುಲದ ದೃಶ್ಯ ರಮಣೀಯ. 11ನೇ ಶತಮಾನದ ಕಲ್ಯಾಣ ಚಾಲುಕ್ಯ ದೇಗುಲವಿದು. ಭೀಮೇಶ್ವರನೆಂಬ ಶಿವಲಿಂಗವಲ್ಲದೆ, ಲಕ್ಷ್ಮೀನಾರಾಯಣ, ಮಹಿಷಾಸುರ ಮರ್ದಿನಿ ಮೊದಲಾದ ವಿಗ್ರಹಗಳು ಆಕರ್ಷಕವಾಗಿವೆ.

ಇನ್ನು ಜಿಲ್ಲೆಯ ಕೇಂದ್ರನಗರ ದಾವಣಗೆರೆ. ಇಲ್ಲಿರುವ ದುರ್ಗಾ ದೇವಾಲಯ ಬಹು ಪ್ರಸಿದ್ಧ. ಅನೇಕ ಆಯುಧಗಳನ್ನು ಧರಿಸಿರುವ ಮಹಿಷಾಸುರ ಮರ್ದಿನಿ ದುರ್ಗೆಯ ಶಿಲ್ಪವು ಅತಿ ಸೂಕ್ಷ್ಮ ಕೆತ್ತನೆಯಿಂದ ಮನಸೆಳೆಯುವಂತಿದೆ.

ದಾವಣಗೆರೆಯಿಂದ ಎಂಟು ಕಿಮೀ ದೂರದ ಆವರಗೊಳ್ಳದಲ್ಲಿ 11ನೇ ಶತಮಾನದ ಕನ್ನೇಶ್ವರ ದೇವಾಲಯ ಮತ್ತು ವೀರಭದ್ರ ದೇವಾಲಯಗಳಿವೆ. ಇಲ್ಲಿಯ ನಂದಿ ವಿಗ್ರಹ ಅತ್ಯಾಕರ್ಷಕ.

ದಾವಣಗೆರೆಯಿಂದ ಮೂರೇ ಕಿಮೀ ದೂರದಲ್ಲಿರುವ ಆನೆಕೊಂಡದ ಬಸವೇಶ್ವರ ದೇವಾಲಯವೂ ಚಾಲುಕ್ಯರ ಕಾಲದ್ದು. 1120ರಲ್ಲಿ ನಿರ್ಮಾಣವಾದ ಗುಡಿ. ದೇಗುಲದ ಕಟ್ಟಡ, ಬಾಗಿಲುವಾಡ, ನಂದಿ, ಕಂಬಗಳು ಎಲ್ಲವೂ ಚಾಲುಕ್ಯ ಶೈಲಿಯ ಒಳ್ಳೆಯ ಮಾದರಿಗಳು.







ಆನೆಕೊಂಡದಿಂದ ಮೂರು ಕಿಮೀ ದೂರದಲ್ಲಿ ಎಲೆಬೇತೂರು ಎಂಬ ಗ್ರಾಮವಿದೆ. ಇಲ್ಲಿರುವ ಕಲ್ಲೇಶ್ವರ ದೇವಾಲಯ 1066ರಷ್ಟು ಪುರಾತನವಾದುದು. ಉಚ್ಚಂಗಿ ಪಾಂಡ್ಯರ ಕಾಲದ ಈ ಗುಡಿಯಲ್ಲಿ ಇರಿಸಿರುವ ಮಹಿಷ ಮರ್ದಿನಿಯ ಶಿಲ್ಪ ಅನುಪಮವಾಗಿದೆ. ದೇವಿಯ ಕೋಪಾವೇಶ, ಎಮ್ಮೆಯ ದೇಹದಿಂದ ಹೊರಬರಲೆಳಸುವ ರಕ್ಕಸನ ದೈನ್ಯ ಎಲ್ಲವೂ ಸೊಗಸಾಗಿ ಚಿತ್ರಿತವಾಗಿವೆ. ದಾವಣಗೆರೆಯಿಂದ ಲೋಕಿಕೆರೆ ಎಂಬ ಗ್ರಾಮಕ್ಕೆ ಪ್ರತ್ಯೇಕ ರಸ್ತೆಯಿದೆ. ಇಲ್ಲಿ ಕೇತೇಶ್ವರ ಮತ್ತು ಲಕ್ಷ್ಮೀನಾರಾಯಣ ದೇಗುಲಗಳಿವೆ. ಶಿವನ ಗುಡಿಯ ನಂದಿ, ಭುವನೇಶ್ವರಿಯಲ್ಲಿ ದಿಕ್ಪಾಲಕರಿಂದ ಆವೃತನಾದ ನಟರಾಜನ ಶಿಲ್ಪ ಆಕರ್ಷಕ.

ದಾವಣಗೆರೆಯಿಂದ ಚಿತ್ರದುರ್ಗ ರಸ್ತೆಯಲ್ಲಿ 37 ಕಿಮೀ ಕ್ರಮಿಸಿ ಬಲದ ರಸ್ತೆಗೆ ತಿರುಗಿ ನೀರ್ಥಡಿ ಗ್ರಾಮ ತಲುಪಬಹುದು. ಇಲ್ಲಿರುವ ರಂಗನಾಥ ದೇವಾಲಯ ವಿಜಯನಗರ ಕಾಲದ ಭವ್ಯವಾದ ನಿರ್ಮಾಣ. ಮಂಟಪ, ಕಂಬಗಳ ಮೇಲಿನ ಉಬ್ಬು ಶಿಲ್ಪಗಳು, ಧ್ವಜಸ್ತಂಭದ ಪೀಠದಲ್ಲಿ ಕೆತ್ತಿರುವ ಭಕ್ತರ ಸಾಲು, ಶಿಖರ ಎಲ್ಲವೂ ವಿಶೇಷವಾಗಿವೆ.


**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**

ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ನೋಡಲು ಬೇಕಾದ ಲಿಂಕ್ ಇಲ್ಲಿದೆ:
http://YouTube.com/AnanthkumarPratishthana






















JANADESH YATR
MYSORE TO BHOPA




तीय जनता पार्टी
RATIYA JANATA PARTY
सुशासन
संकल्प
भाजपा विकल्प

# ಅನಂತಜೀ
1959-


स्वर्ण जयंती रथ






GOVERNMENT OF INDIA
MINISTRY OF CULTURE, YOUTH AFFAIRS & SPORTS
VANDE MATARAM CAMPAIGN

# ವನಯಾನ
## -2018








संकल्प "भारत सुरक्षा" का संदेश राष्ट्रवाद का
भारत सुरक्षा यात्रा
१० एप्रिल २००६
जनता पार्टी– मुंबई


भ्रष्टाचार के खिलाफ




UREA




PRIME MINISTER







ಸಸ್ಯಲೋಕ ಪರಿಚಯ ಮಾಲಿಕೆ- 12

# ಭೂಲೋಕದ ಪುಷ್ಪ 'ಅನಂತ'



ಹೂ ತುಂಬಿದ ಮರದ ನೆರಳು ಹೂವಿಗಿಂತ ಹಗುರ ಎಂಬ ಕವಿ ಸಾಲು ಎಷ್ಟು ಸತ್ಯ! ನೆರಳು ಬಹಳ ಆಪ್ತ. ಇನ್ನು ಆ ನೆರಳು ನೀಡುವ ಮರದ ತುಂಬೆಲ್ಲ ಹೂವುಗಳಿದ್ದರೆ? ನೆರಳು ನೀಡಿದ ಹೂವಿನ ಗಿಡಕ್ಕೂ, ಹೂವಿಗೂ ಮನಸೋಲದವರೇ ಇಲ್ಲ. ಕೆಲವು ಹೂವುಗಳು ಬಣ್ಣ ಮಾತ್ರದಿಂದ ಗಮನ ಸೆಳೆದರೆ, ಇನ್ನು ಕೆಲವು ಹೂವುಗಳು ತಮ್ಮ ಸುವಾಸನೆಯಿಂದ ನಮ್ಮನ್ನು ಆಕರ್ಷಿಸುತ್ತವೆ. ಇನ್ನು ಕೆಲವು ಹೂಗಳು ಬಣ್ಣ ಹಾಗೂ ಸುವಾಸನೆ ಎರಡರಿಂದಲೂ ನಮಗೆ ಪ್ರಿಯವಾಗುತ್ತವೆ.

ಎಷ್ಟೋ ಹೂವುಗಳ ವಿವರಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ. ನೋಡುಗರ ಕಂಗಳಿಗೆ ಔತಣಕೂಟವನ್ನು ಏರ್ಪಡಿಸುವ ಹೂವುಗಳ ವೈವಿಧ್ಯಮಯ ಲೋಕವೇ ಈ ಜಗತ್ತಿನಲ್ಲಿದೆ. ನಾವು ಎಷ್ಟೊಂದು ಹೂವುಗಳನ್ನು ನೋಡಿದ್ದೇವೆ, ಮುಟ್ಟಿದ್ದೇವೆ, ಮುಡಿದಿದ್ದೇವೆ. ಆದರೆ, ಅನೇಕ ಹೂವುಗಳ ಹೆಸರುಗಳನ್ನು ನಾವು ನೀವು ಕೇಳಿರುವುದೇ ಅನುಮಾನ. ಅಂತಹ ಹೂವುಗಳಲ್ಲಿ 'ಅನಂತ ಪುಷ್ಪ' ಅಥವಾ 'ಗಂಧರಾಜ ಪುಷ್ಪ' ಕೂಡ ಒಂದು.

ನಾನು ಅನಂತ ಪುಷ್ಪ ಗಿಡವನ್ನು ಮೊದಲು ನೋಡಿದ್ದು, 1999ರ ಮಳೆಗಾಲದಲ್ಲಿ, ಶ್ರೀ ಅನಂತಕುಮಾರ್ ಅವರ ದಿಲ್ಲಿಯ ಮನೆಯಲ್ಲಿ. ಸುಮಾರು 10-12 ಅಡಿ ಎತ್ತರವಾಗಿರುವ ಗಿಡದಲ್ಲಿ ಬಿಳಿಬಣ್ಣದ, ಸುವಾಸನೆಯಿಂದ ಕೂಡಿದ ಸುಂದರವಾದ ಹೂವುಗಳಿರುತ್ತವೆ. ಗುಲಾಬಿಯಷ್ಟೇ ದೊಡ್ಡದಾಗಿರುವ, ಮೇಣದಲ್ಲಿ ನಿರ್ಮಿಸಿದಂತೆ ಕಾಣುವ, ಬಿಳಿ ಪಕಳೆಗಳನ್ನು ಹೊಂದಿದ ಹೂವುಗಳು ಮತ್ತು ಹಸಿರು ಎಲೆಗಳಿಂದ ತುಂಬಿದ ಈ ಗಿಡವನ್ನು ನೋಡುವುದೇ ಒಂದು ರೀತಿ ಕಣ್ಣಿಗೆ ಹಬ್ಬ. ಇತ್ತೀಚೆಗೆ ತಿಳಿ ಹಳದಿ ಹಾಗೂ ಗುಲಾಬಿ ಕೆಂಪು ಬಣ್ಣದ ಅನಂತ ಪುಷ್ಪಗಳು ಕೂಡ ಕಂಡು ಬರುತ್ತಿವೆ. ವಿಶ್ವದಾದ್ಯಂತ ಅನಂತ ಪುಷ್ಪದ ಹೊಸ ಹೊಸ ತಳಿಗಳನ್ನು ಸಸ್ಯವಿಜ್ಞಾನಿಗಳು ನಿರಂತರವಾಗಿ ಸಂಶೋಧಿಸುತ್ತಿದ್ದಾರೆ.

**ಅನಂತ ಪುಷ್ಪದ ಮೂಲ:** ಅನಂತ ಪುಷ್ಪದ ವೈಜ್ಞಾನಿಕ ಹೆಸರು ಗಾರ್ಡೇನಿಯಾ ಗ್ರ್ಯಾಂಡಿಫ್ಲೋರಾ, ಗಾರ್ಡೇನಿಯಾ ಜಾಸ್ಮಿನಾಯ್ಡ್ಸ್(Gardenia grandiflora). ರೂಬಿಯೇಸಿ ಕುಟುಂಬಕ್ಕೆ ಸೇರಿದ ಸುಂದರವಾದ ಈ ಹೂ ಗಿಡ ತೋಟದಲ್ಲಿದ್ದರೆ ಇಡೀ ಹೂತೋಟಕ್ಕೆ ವಿಶಿಷ್ಟ ಸೊಬಗು ಬರುತ್ತದೆ.

ಪೊದೆಯಂತೆ ಬೆಳೆಯುವ ನಿತ್ಯಹರಿದ್ವರ್ಣದ 'ಅನಂತ ಪುಷ್ಪ' ಗಿಡದ ಮೂಲ ಚೀನಾ ದೇಶವಾಗಿದ್ದರೂ ಏಷ್ಯಾದ ಎಲ್ಲ ದೇಶಗಳಲ್ಲಿ, ಮಡಗಾಸ್ಕರ್, ಪೆಸಿಫಿಕ್ ದ್ವೀಪಗಳು ಹಾಗೂ ಆಸ್ಟ್ರೇಲಿಯಾಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಇತ್ತೀಚೆಗೆ ಉತ್ತರ ಅಮೆರಿಕ, ಕೆನಡಾ ಹಾಗೂ ಯುರೋಪಿನ ಅನೇಕ ದೇಶಗಳಲ್ಲಿಯೂ ಈ ಗಿಡಗಳನ್ನು ಬೆಳೆಸುತ್ತಿದ್ದಾರೆ. ಬೆಂಗಳೂರಿನ ಲಾಲ್ ಬಾಗ್ ಮತ್ತು ಕಬ್ಬನ್ ಪಾರ್ಕ್‌ಗಳಲ್ಲಿಯೂ ಕಾಣಬಹುದು. ಈ ಗಿಡವನ್ನು ಕುಂಡಗಳಲ್ಲಿ, ನೆಲದಲ್ಲಿ ಅಲಂಕಾರಿಕ ಪೊದೆಯಾಗಿ ಅಥವಾ ಮರಗಳ ರೂಪದಲ್ಲಿ ಬೆಳೆಸುತ್ತಾರೆ. ಇದರ ಕಡುಹಸಿರು ಬಣ್ಣದ ಎಲೆಗಳು ಹೊಳಪಿನಿಂದ ಕೂಡಿರುತ್ತವೆ. ಹೂವುಗಳ ಸುವಾಸನೆ ವಿಶಾಲವಾದ ಪ್ರದೇಶದಲ್ಲಿ ಪಸರಿಸುತ್ತದೆ. ಈ ಸುಗಂಧದಿಂದಾಗಿಯೇ ಇದನ್ನು 'ಗಂಧರಾಜ' ಎಂದೂ ಕರೆಯುತ್ತಾರೆ.

ಗಂಧರಾಜ ಪುಷ್ಪಗಳು ಒಂದು ಅಥವಾ ಎರಡು ಸುತ್ತುಗಳನ್ನು ಹೊಂದಿರುತ್ತವೆ. ಹೂವುಗಳು ವಸಂತಕಾಲ ಮತ್ತು ಮಳೆಗಾಲದಲ್ಲಿ ಅರಳಿ ಮೂರುನಾಲ್ಕು ದಿನ ಗಿಡಗಳ ಮೇಲೆಯೇ ಇದ್ದು ನಂತರ ಬಾಡುತ್ತವೆ. ಈ ಹೂವುಗಳ ಅಲಂಕಾರಿಕ ಮೌಲ್ಯವು ಹೆಚ್ಚಿದ್ದರೂ ಗಿಡಗಳ ಕಾಳಜಿ ವಹಿಸುವುದು ಸುಲಭವಲ್ಲ.

**ಅನಂತ ಪುಷ್ಪದ ಉಪಯೋಗಗಳು:** ಈ ಹೂವುಗಳಿಂದ ಸುಗಂಧ ದ್ರವ್ಯವನ್ನು ತಯಾರಿಸುತ್ತಾರೆ. ಚೀನಾ ಹಾಗೂ ಜಪಾನೀ ಸಾಂಪ್ರದಾಯಿಕ ಔಷಧಪದ್ಧತಿಗಳಲ್ಲಿ ಅನಂತ ಪುಷ್ಪವನ್ನು ಜ್ವರ ನಿವಾರಕ, ಪಚನ ಸಮಸ್ಯೆಗಳಿಗೆ ಬಳಸುತ್ತಾರೆ. ಈ ಹೂವು ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರನಾಶಕ ಗುಣಗಳನ್ನು ಹೊಂದಿದೆ. ಈ ಹೂವಿನಿಂದ ತಯಾರಿಸಿದ ಸುಗಂಧ ತೈಲವನ್ನು ನೋವುನಿವಾರಕವಾಗಿ, ಚರ್ಮದ ಔಷಧಿಯಾಗಿ ಬಳಸುತ್ತಾರೆ. ಭಾರತ ದೇಶದ ಮನೆಮನೆಗಳಲ್ಲಿ, ದೇವಸ್ಥಾನಗಳಲ್ಲಿ ಶಿವ ಹಾಗೂ ಅನಂತಪದ್ಮನಾಭ ದೇವರ ಪೂಜೆಗೆ ಈ ಹೂ ಬೇಕೇ ಬೇಕು.



**ಛಾಯಾ ಓಕ್ ಬಾಪಟ್**

## ಸರಳ ಯೋಗಾಭ್ಯಾಸ

### ತಾಡಾಸನ



ತಾಡಾಸನವು ಎರಡು ಸಂಸ್ಕೃತ ಪದಗಳಿಂದ ಕೂಡಿದೆ, ತಾಡಾ ಎಂದರೆ ಪರ್ವತ ಮತ್ತು ಆಸನ ಎಂದರೆ ದೇಹದ ಭಂಗಿ. ಇದನ್ನು ತಾಳೇ ಮರದ ಭಂಗಿ ಎಂದೂ ಕರೆಯುತ್ತಾರೆ.

**ಆಸನ ಮಾಡುವ ರೀತಿ**

ಮೊದಲನೆಯದಾಗಿ, ಎದ್ದು ನಿಂತು ಪಾದಗಳನ್ನು ಸ್ವಲ್ಪ ತೆರೆದು (approx 2 inches) , ದೇಹದ ತೂಕ ಎರಡೂ ಕಾಲುಗಳ ಮೇಲೆ ಸಮಾನವಾಗಿ ಇಟ್ಟುಕೊಂಡು ನಂತರ ಉಸಿರನ್ನು ಒಳಗೆ ಎಳೆಯಿರಿ ಮತ್ತು ಎರಡೂ ಕೈಗಳನ್ನು ನೇರವಾಗಿ ತಲೆಯ ಮೇಲೆ ತೆಗೆದುಕೊಳ್ಳಿ ಹಾಗೂ ಎರಡೂ ಕೈಗಳ ಬೆರಳನ್ನು ಒಟ್ಟಿಗೆ ಸೇರಿಸಿ ಅಂಗೈಗಳನ್ನು ಆಕಾಶದ ಕಡೆಗೆ ತಿರುಗಿಸಿ ಹಾಗೂ ದೇಹವನ್ನು ಸಾಧ್ಯವಾದಷ್ಟು ಆಕಾಶದ ಕಡೆಗೆ ಎಳೆಯಲು ಪ್ರಯತ್ನಿಸಿ ಮತ್ತು ಸ್ವಲ್ಪ ಸಮಯ ಉಳಿಯಿರಿ ಸಾಧಾರಣ ಉಸಿರಟದೊಂದಿಗೆ ನಂತರ ಉಸಿರು ಬಿಡುತ್ತಾ ಸಮಸ್ಥಿತಿಗೆ ಬನ್ನಿ. ಆಸನವನ್ನು 3 ರಿಂದ 5 ಬಾರಿ ಪುನರಾವರ್ತಿಸಿ.

**ತಾಡಾಸನದ ಪ್ರಯೋಜನಗಳು**

1.ಬೆಳೆಯುವ ಮಕ್ಕಳು ಪ್ರತಿದಿನ ತಾಡಾಸನ ಅಭ್ಯಾಸ ಮಾಡುವ ಮೂಲಕ ದೇಹದ ಉದ್ದವನ್ನು ಹೆಚ್ಚಿಸಬಹುದು. ಹಾಗೂ ಇದು ಬೆನ್ನುಮೂಳೆಯನ್ನು ಬಲಪಡಿಸುತ್ತದೆ
2.ಈ ಅಭ್ಯಾಸವು ಬೆನ್ನು ನೋವಿನಿಂದ ಪರಿಹಾರವನ್ನು ನೀಡುತ್ತದೆ ಮತ್ತು ಇದು ದೇಹದ ಭಂಗಿಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.
3.ಈ ಆಸನದ ಅಭ್ಯಾಸದಿಂದ ಏಕಾಗ್ರತೆ ಮತ್ತು ಅರಿವು ಹೆಚ್ಚಿಸಬಹುದು.
4.ತಾಡಾಸನ ಕಾಲು, ಸೊಂಟ ಮತ್ತು ತೊಡೆಗಳನ್ನು ಸಹ ಬಲಪಡಿಸುತ್ತದೆ.

ಡಾ. ರಾಘವೇಂದ್ರ ಪ್ರಸಾದ್,
ಸಹಬಾಳ್ವೆ, ಬೆಂಗಳೂರು

**ಎಚ್ಚರಿಕೆ ವಹಿಸಬೇಕಾದವರು**

ಯಾರಿಗೆ Arthritis, Vertigo, Low blood pressure ಸಮಸ್ಯೆ ಇರುತ್ತದೆಯೋ ಹಾಗೂ ಮಂಡಿ, ಸೊಂಟ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಿರುತ್ತಾರೋ ಅವರು ಮತ್ತು ಗರ್ಭಿಣಿ ಸ್ತ್ರೀಯರು ಎಚ್ಚರ ವಹಿಸಬೇಕು ಹಾಗೂ ತಜ್ಞರಿಂದ ಸರಿಯಾದ ಸಲಹೆ ಪಡೆಯಬೇಕು

# ರಾಮಚಂದ್ರ ದತ್ತಾತ್ರೇಯ ರಾನಡೆ

ವ್ಯಕ್ತಿ ವಿಶೇಷ ಮಾಲಿಕೆ



ಆಧ್ಯಾತ್ಮಪಥದಲ್ಲಿ ಆತ್ಮ ಸಾಕ್ಷಾತ್ಕಾರಕ್ಕೆ ಮೂರು ಮಾರ್ಗಗಳಿವೆ; ಜ್ಞಾನ ಮಾರ್ಗ, ಕರ್ಮ ಮಾರ್ಗ ಮತ್ತು ಭಕ್ತಿ ಮಾರ್ಗ. ಇವುಗಳಲ್ಲಿ ಭಕ್ತಿ ಮಾರ್ಗವು ಅತ್ಯಂತ ಸರಳವಾದುದು. ಇದು ಜನಸಾಮಾನ್ಯರಿಗೂ ನಿಲುಕುವ ಮಾರ್ಗ. ಹನ್ನೆರಡನೆಯ ಶತಮಾನದ ನಂತರದ ಸಂತರು ಭಕ್ತಿ ಮಾರ್ಗವನ್ನು ಅತ್ಯಂತ ಜನಪ್ರಿಯಗೊಳಿಸಿದರು. ಕೇವಲ ನಾಮಸ್ಮರಣೆ, ನಾಮಸಾಧನದ ಬಲದಿಂದ ಆತ್ಮಸಾಕ್ಷಾತ್ಕಾರವನ್ನು ಪಡೆಯಬಹುದೆಂದು ಪ್ರತಿಪಾದಿಸುವ ಭಕ್ತಿ ಮಾರ್ಗದಲ್ಲಿ ಹಲವು ಸಂಪ್ರದಾಯಗಳಿವೆ. ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಕಾಡ ಸಿದ್ಧ, ವಾರಕರಿ ಮತ್ತು ಸಮರ್ಥ ಸಂಪ್ರದಾಯಗಳು ಅತ್ಯಂತ ಹೆಚ್ಚು ಜನರನ್ನು ಆಕರ್ಷಿಸಿದ್ದವು. ಈ ಮೂರು ಸಂಪ್ರದಾಯಗಳ ಸಾರವನ್ನು ಹೀರಿಕೊಂಡು ಹುಟ್ಟಿದ ಸಂಪ್ರದಾಯ, ಇಂಚಗೇರಿ ಸಂಪ್ರದಾಯ. ಈ ಸಂಪ್ರದಾಯದ ಮೊದಲ ಗುರು ಶ್ರೀ ಗುರುಲಿಂಗ ಜಂಗಮ ಮಹಾರಾಜರು. ರಾಮಚಂದ್ರ ದತ್ತಾತ್ರೇಯ ರಾನಡೆಯವರು ಈ ಸಂಪ್ರದಾಯವನ್ನು ಜಾಗತಿಕ ವೇದಿಕೆಗೆ ತಂದು ನಿಲ್ಲಿಸಿದ ಮಹಾಮಹಿಮರು.

ರಾಮಚಂದ್ರ ದತ್ತಾತ್ರೇಯ ರಾನಡೆಯವರು ಜನಿಸಿದ್ದು 1886 ಜುಲೈ ಮೂರನೆಯ ತಾರೀಕು. ಜಮಖಂಡಿ ಇವರ ಜನ್ಮ ಸ್ಥಳ. ತಂದೆ ಜಮಖಂಡಿ ಸಂಸ್ಥಾನದಲ್ಲಿ ಉದ್ಯೋಗ ಮಾಡುತ್ತಿದ್ದರು. ತಾಯಿ ಪಾರ್ವತಿ ಬಾಯಿ, ಬಾಲಕ ರಾಮಚಂದ್ರರಲ್ಲಿ ನಾಮಸ್ಮರಣೆಯ ಬೀಜವನ್ನು ಬಿತ್ತಿದವರು. ರಾಮಚಂದ್ರರು ಜಮಖಂಡಿಯ ಪರಶುರಾಮ ಭಾವು ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿ ನಂತರ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ತಮ್ಮ ವಿದ್ಯಾಭ್ಯಾಸಕ್ಕೆ ಸತತವಾಗಿ ಶಿಷ್ಯವೇತನ ಪಡೆಯುತ್ತಿದ್ದ ರಾನಡೆಯವರು ಸಂಸ್ಕೃತದಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿಯೂ ಬಿಎ ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾದುದು ಅವರಿಗೂ ಆಘಾತಕರವಾಗಿತ್ತು. ಆದದ್ದೆಲ್ಲ ಒಳಿತೇ ಆಯಿತು ಎಂಬಂತೆ ರಾನಡೆಯವರು ಗಣಿತದ ಅಧ್ಯಯನವನ್ನು ನಿಲ್ಲಿಸಿ ತತ್ತ್ವಶಾಸ್ತ್ರದತ್ತ ಹೊರಳಿಕೊಂಡರು. ಬಿಎ ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ಪಾಸಾದ ರಾನಡೆಯವರು ಎರಡೆರಡು ಸುವರ್ಣಪದಕಗಳನ್ನು ಗಳಿಸಿ ಮುಂಬಯಿ ವಿಶ್ವವಿದ್ಯಾನಿಲಯಕ್ಕೆ ಪ್ರಥಮರಾಗಿ ಎಂಎ ಪರೀಕ್ಷೆಯಲ್ಲಿ ಉತ್ತೀರ್ಣರಾದರು

ರಾನಡೆಯವರು ಪಾಶ್ಚಿಮಾತ್ಯ ತತ್ತ್ವಶಾಸ್ತ್ರವನ್ನು ಅರಗಿಸಿಕೊಂಡು ಅದರ ಮೂಲಕವೇ ಭಾರತೀಯ ತತ್ತ್ವಶಾಸ್ತ್ರವನ್ನು ಅಧ್ಯಯನ ಮಾಡಿದರು ಎಂಬುದೂ ಅಚ್ಚರಿಯ ವಿಷಯ. ಓದು ಮುಗಿದ ನಂತರ ಮೊದಲು ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ನಂತರ ಸಾಂಗಲಿಯ ವೆಲ್ಲಿಂಗ್ಟನ್ ಕಾಲೇಜಿನಲ್ಲಿ ಸುಮಾರು ಹತ್ತು ವರ್ಷಗಳ ಕಾಲ ಪ್ರಾಧ್ಯಾಪಕ ವೃತ್ತಿಯನ್ನು ನಡೆಸಿದರು. ಅವರು ಸಂಸ್ಕೃತ ಭಾಷೆಯ ಮೇಲೆ ಪ್ರಭುತ್ವ ಹೊಂದಿದ್ದರು. ಅದರಂತೆಯೇ ಗ್ರೀಕ್ ಭಾಷೆಯಲ್ಲಿಯೂ ಪಾಂಡಿತ್ಯವನ್ನು ಗಳಿಸಿದ್ದರು.

ತೀವ್ರ ಅನಾರೋಗ್ಯದ ಕಾರಣ ಅಧ್ಯಾಪಕ ವೃತ್ತಿಗೆ ರಾಜೀನಾಮೆ ನೀಡಿ ವಿಜಯಪುರ ಜಿಲ್ಲೆಯ ನಿಂಬಾಳ ಎಂಬ ಊರಿನಲ್ಲಿ ಜಮೀನು ಖರೀದಿಸಿ ನೆಲೆಸಿದರು. ಇಂಚಗೇರಿ ಸಂಪ್ರದಾಯದ ಶ್ರೀ ಬಾವೂಸಾಹೇಬ ಮಹಾರಾಜ್ ಉಮದಿಯವರು 1901 ರಲ್ಲಿ ಜಮಖಂಡಿಗೆ ಬಂದಾಗ ರಾನಡೆಯವರನ್ನು ಅನುಗ್ರಹಿಸಿ ನಾಮಜಪದ ಉಪದೇಶ ನೀಡಿದ್ದರು. ಹೀಗಾಗಿ, ನಿಂಬಾಳದಲ್ಲಿ ನೆಲೆಸಿರುವಾಗಲೇ ಅವರು ತಮ್ಮ ಇಡೀ ಜೀವನವನ್ನು ದೇವರ ನಾಮಸ್ಮರಣೆಗೆ ಮೀಸಲಿಡುವ ಹಾಗೂ ಸಾಧು-ಸಂತರ ಸಹವಾಸದಲ್ಲಿ ಕಳೆಯುವ ನಿರ್ಧಾರ ತೆಗೆದುಕೊಂಡರು. ಅತೀವ ದೈವಭಕ್ತಿ ಹಾಗೂ ತತ್ತ್ವಜ್ಞಾನದಲ್ಲಿ ಅಗಾಧ ಪಾಂಡಿತ್ಯ ಹೊಂದಿದ್ದ ರಾನಡೆಯವರನ್ನು ಜನರು ಗುರುದೇವ ಎಂದು ಕರೆಯಲಾರಂಭಿಸಿದರು.

ನಿಂಬಾಳದಲ್ಲಿ ನೆಲೆಸಿದರೂ ಇವರ ಕೀರ್ತಿ ದೇಶದಾದ್ಯಂತ ಹರಡಿತ್ತು. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವಾಗಲೇ ಬೆಂಗಳೂರಿನ ಶಂಕರಮಠದಲ್ಲಿ ಉಪನಿಷತ್ತುಗಳ ಕುರಿತು ಸರಣಿ ಉಪನ್ಯಾಸ ನೀಡಿದರು. ಈ ಸರಣಿ ಉಪನ್ಯಾಸಗಳ ಅಧ್ಯಕ್ಷತೆಯನ್ನು ಬರೋಡದ ಮಹಾರಾಜ ಸಯಾಜಿರಾವ್ ಗಾಯಕ್ವಾಡರೇ ವಹಿಸಿದ್ದರು. ನಿಂಬಾಳದಲ್ಲಿದ್ದಾಗ "ಉಪನಿಷತ್ತುಗಳ ತತ್ತ್ವಜ್ಞಾನದ ರಚನಾತ್ಮಕ ಸಮೀಕ್ಷೆ" ಎಂಬ ಬೃಹತ್ ಗ್ರಂಥವನ್ನು ಬರೆದು ಪಂಡಿತಮಾನ್ಯರಾದರು. ಈ ಗ್ರಂಥದ ಖ್ಯಾತಿಯಿಂದಾಗಿ ರಾನಡೆಯವರಿಗೆ ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಲು ಆಹ್ವಾನ ಬಂದಿತು. 1927 ರಿಂದ 1946 ರವರೆಗೆ ಅಲ್ಲಿ ಕೆಲಸ ಮಾಡಿದ ಅವರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನಿವೃತ್ತರಾದರು. ಅಲಹಾಬಾದ್ ವಿಶ್ವವಿದ್ಯಾನಿಲಯವು 1947 ರಲ್ಲಿ ಇವರಿಗೆ ಡಿ. ಲಿಟ್ ಪದವಿಯನ್ನು ನೀಡಿ ಗೌರವಿಸಿತು. ಡಾ. ರಾಧಾಕೃಷ್ಣನ್ ದೇಶದ ಉಪ ರಾಷ್ಟ್ರಪತಿಗಳಾಗಿದ್ದಾಗ 1954ರ ಏಪ್ರಿಲ್ ನಲ್ಲಿ ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಸಂತ ವಾಙ್ಮಯದ ಕುರಿತು ಎರಡು ಉಪನ್ಯಾಸಗಳನ್ನು ನೀಡಿದರು.

ರಾನಡೆಯವರು ಜೀವನದಲ್ಲಿ ಅನೇಕ ಕಷ್ಟಗಳನ್ನೆದುರಿಸಿದರು. ವಿದ್ಯಾರ್ಥಿಯಾಗಿದ್ದಾಗಲೇ ಮೆದುಳಿನ ಕ್ಯಾನ್ಸರ್ ಕಾಯಿಲೆಗೆ ತುತ್ತಾದ ಅವರು ಇನ್ನೊಮ್ಮೆ ಶ್ವಾಸಕೋಶದ ಕ್ಯಾನ್ಸರಿನಿಂದಲೂ ಬಳಲಿದರು. ಹತ್ತು ತಿಂಗಳ ಗಂಡು ಮಗು, ಎಳೆಯ ಹೆಂಡತಿ ಮತ್ತು ತಮ್ಮ ತಾಯಿಯವರನ್ನು ಕೆಲವೇ ತಿಂಗಳುಗಳ ಅಂತರದಲ್ಲಿ ಕಳೆದುಕೊಂಡರು. ಆದರೆ ನಾಮಜಪದಲ್ಲಿ ಅಪಾರ ವಿಶ್ವಾಸವಿರಿಸಿಕೊಂಡಿದ್ದ ಅವರು ಎಲ್ಲ ಕಷ್ಟಗಳನ್ನೂ ಸಹಿಸಿಕೊಂಡು ಆಧ್ಯಾತ್ಮಪಥದಲ್ಲಿ ಮುನ್ನಡೆದರು.

ನಿವೃತ್ತಿಯ ನಂತರ ರಾನಡೆಯವರು ನಿಂಬಾಳದಲ್ಲಿ ಅಧ್ಯಾತ್ಮ ವಿದ್ಯಾಪೀಠ ಸ್ಥಾಪನೆ ಮಾಡಿದರು. ಇಂಚಗೇರಿ ಸಂಪ್ರದಾಯದ ಅದ್ವೈತ ಸಂಪ್ರದಾಯವನ್ನು ಮುಂದುವರಿಸಿದರು. ರಾನಡೆಯವರು ಅಪಾರ ಶಿಷ್ಯವೃಂದವನ್ನು ಹೊಂದಿದ್ದರು. ಜಾತಿ ಮತಗಳನ್ನು ಪರಿಗಣಿಸದೆ ಎಲ್ಲರನ್ನೂ ಸಮಾನ ಭಾವದಿಂದ ಕಾಣುತ್ತಿದ್ದ ಇವರು ಸಹಸ್ರಾರು ಜನರಿಗೆ ನಾಮದೀಕ್ಷೆಯನ್ನು ಕೊಟ್ಟರು. ಅನುಭಾವ ಮಾರ್ಗದ ಅದ್ವೈತ ಅಥವ ಆನಂದವಾದ ಅಥವ ಸಾಕ್ಷಾತ್ಕಾರವಾದ ಎಂದು ಪರಿಣಿಸಲ್ಪಡುವ ದರ್ಶನ ಇವರದ್ದು. ನಿಷ್ಠುರವಾದ ನೈತಿಕತೆ ಮತ್ತು ನಾಮಸ್ಮರಣೆ ಸಾಕ್ಷಾತ್ಕಾರದ ಮಾರ್ಗದಲ್ಲಿ ಮುನ್ನಡೆಯುವವರಿಗೆ ಅಗತ್ಯ ಎಂದು ಇವರು ಭಾವಿಸಿದ್ದರು.

ಇಂಚಗೇರಿ ಸಂಪ್ರದಾಯದ ಗುರುಗಳಾಗಿದ್ದ ಅಂಬುರಾವ್ ಮಹಾರಾಜರು 1933 ರಲ್ಲಿ ನಿಧನರಾದ ನಂತರ ಸಂಪ್ರದಾಯದ ಧುರೀಣತ್ವವನ್ನು ರಾನಡೆಯವರು ವಹಿಸಿಕೊಂಡರು. ರಾನಡೆಯವರು ತಮ್ಮ ಸತ್ಸಂಗಗಳಲ್ಲಿಯೂ ಹೊಸತನವನ್ನು ಜಾರಿಗೆ ತಂದರು, ಬಡವ ಬಲ್ಲಿದರೆಂಬ ಭೇದವಿಲ್ಲದೆ, ಜಾತಿ, ಧರ್ಮಗಳ ಅಂತರವನ್ನು ನೋಡದೆ ಸತ್ಸಂಗದಲ್ಲಿ ಪ್ರತಿಯೊಬ್ಬರೂ ಭಾಗವಹಿಸುವಂತೆ ಉತ್ತೇಜಿಸುತ್ತಿದ್ದರು.

ರಾನಡೆಯವರು ಆಂಗ್ಲಭಾಷೆಯಲ್ಲಿ ಅನೇಕ ಮಹತ್ವದ ಗ್ರಂಥಗಳನ್ನು ರಚಿಸಿದ್ದಾರೆ. ತಮ್ಮ ಆಧ್ಯಾತ್ಮಿಕ ಗುರುಗಳಾಗಿದ್ದ ಭಾವೂರಾವ್ ಮಹಾರಾಜರು ತಮ್ಮ ಉಪನ್ಯಾಸಗಳಲ್ಲಿ ಬಳಸುತ್ತಿದ್ದ ಕನ್ನಡ ಪದ್ಯಗಳನ್ನು ಸಂಗ್ರಹಿಸಿ ಪ್ರಕಟಿಸಿದರು. A constructive survey of upanishadic Philosophy (1926), Mysticism in Maharastra (1933), Pathway to God in Hindi Literature (1954), The Bhagavadgita as a Philosophy of God Realisation (1959), Pathway to God in Kannada Literature (1960), ಹಾಗೂ Vedanta as a culmination of Indian Phylosophical Thought (1960) ಇವರು ಬರೆದ ಮಹತ್ವದ ಪುಸ್ತಕಗಳು. ರಾನಡೆಯವರು ಬರಹಗಾರರಾಗಿ, ಸಂಪಾದಕರಾಗಿ, ಅಥವ ಸಂಗ್ರಾಹಕರಾಗಿ 342 ಪತ್ರಿಕೆಗಳಲ್ಲಿ ಸುಮಾರು 126 ಪ್ರಕಟಣೆಗಳನ್ನು ಮಾಡಿದ್ದಾರೆ. ರಂಗನಾಥ ದಿವಾಕರ, ದ ರಾ ಬೇಂದ್ರೆ, ಆಲೂರು ವೆಂಕಟರಾಯರು, ಬಾಬಾ ಅಂಬೂರಾವ್ ಮಹಾರಾಜ್, ಕಾಕಾ ಖಾರ್ನೀಸ್, ನಿಂಬರಗಿ ಮಹಾರಾಜರು ಮುಂತಾದವರ ಜೊತೆಗಿನ ಅವರ ನಿಕಟ ಸಂಬಂಧವು ಆಧ್ಯಾತ್ಮ ಮತ್ತು ಸಾಹಿತ್ಯಗಳು ಪರಸ್ಪರ ಪೂರಕ ಎಂಬ ಅವರ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ.

ಗುರುದೇವ ರಾನಡೆಯವರು ತಮ್ಮ ನಡೆನುಡಿಗಳಲ್ಲಿ ಸರಳವಾಗಿರುತ್ತಿದ್ದರು. ಪಂಚೆ, ಬಿಳಿಯಂಗಿ, ಕೆಲವೊಮ್ಮೆ ಕೋಟು, ರುಮಾಲು ಮತ್ತು ವಿಶೇಷ ಸಂದರ್ಭಗಳಲ್ಲಿ ಪಗಡಿ ಅವರ ಉಡುಪಾಗಿತ್ತು. ಆಹಾರವೂ ಸರಳ, ಮಾತುಗಳೂ ಸರಳವಾಗಿದ್ದವು. ನಿಂಬಾಳವು ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಗಡಿ ಪ್ರದೇಶವಾಗಿದ್ದುದರಿಂದ ಎರಡೂ ರಾಜ್ಯಗಳ ಲಕ್ಷಾಂತರ ಜನರು ಅವರನ್ನು ಗುರುದೇವರೆಂದು ಮನ್ನಿಸಿ ಗೌರವಿಸುತ್ತಿದ್ದರು.

ಗುರುದೇವ ರಾನಡೆಯವರು 1957ರ ಜೂನ್ ಆರರಂದು ನಿಂಬಾಳದಲ್ಲಿಯೇ ಇಚ್ಛಾಮರಣಿಯಂತೆ ಇಹಲೋಕ ತ್ಯಾಗ ಮಾಡಿದರು. ನಿಧನಕ್ಕೆ ಐದು ದಿನ ಮೊದಲೇ ಆಹಾರವನ್ನು ತ್ಯಜಿಸಿ ಮೌನವ್ರತ ಕೈಗೊಂಡರು. ಕೊನೆಯ ದಿನ ಅವರ ಸೂಚನೆಯಂತೆ ಭಜನೆ ನಡೆಯುತ್ತಿದ್ದಾಗ ಕೊನೆಯಲ್ಲಿ ಸಾಧಕರು ಕರ್ಪೂರ ಬೆಳಗುತ್ತಿದ್ದಂತೆ ರಾನಡೆಯವರು ಎಲ್ಲರ ಸಮಕ್ಷಮದಲ್ಲಿಯೇ ಪರಮಾತ್ಮನಲ್ಲಿ ಲೀನವಾದರು. ತಾವು ನೆಲೆಸಿದ ಊರು ನಿಂಬಾಳವನ್ನು ವಿಶ್ವದ ನಕ್ಷೆಯಲ್ಲಿ ಎಲ್ಲರೂ ಗುರುತಿಸುವಂತೆ ಮಾಡಿದ, ಇಂಚಗೇರಿ ಸಂಪ್ರದಾಯಕ್ಕೆ ಜಗಮಾನ್ಯತೆ ಗಳಿಸಿಕೊಟ್ಟ ರಾನಡೆಯವರು ಕಣ್ಮರೆಯಾದರೂ ನಿಂಬಾಳದಲ್ಲಿರುವ ಅವರ ಸಮಾಧಿಯು ಸಹಸ್ರಾರು ಜನರನ್ನು ಆಕರ್ಷಿಸುತ್ತಿದೆ.

-ಕೆ. ಜನಾರ್ದನ ತುಂಗ

# ಆವಿಷ್ಕಾರದಲ್ಲಿ ಸಹಯೋಗ - ಎಲ್ಲರಿಗೂ ಗೆಲುವಿನ ಅವಕಾಶ – ಶೂನ್ಯ ಗಳಿಕೆಯ ಪಂದ್ಯವಲ್ಲ

## - ದೇಶ ಮೊದಲು ಸಂವಾದದ 10ನೇ ಆವೃತ್ತಿಯ ವರದಿ

ಅನಂತಕುಮಾರ್ ಪ್ರತಿಷ್ಠಾನವು ನಡೆಸುತ್ತಿರುವ "ದೇಶ ಮೊದಲು ಸಂವಾದ" ಕಾರ್ಯಕ್ರಮದ ಹತ್ತನೆಯ ಆವೃತ್ತಿಯು ಅಂತರ್ಜಾಲದ ಮೂಲಕ ಯಶಸ್ವಿಯಾಗಿ ನಡೆಯಿತು.

10th Nation First Dialogues

ಇನ್ನು ಹತ್ತು ವರ್ಷಗಳಲ್ಲಿ ಭಾರತವು ಅಭಿವೃದ್ಧಿ ಹೊಂದಿದ ದೇಶಗಳ ಸಾಲಿಗೆ ಸೇರಲು ಪೂರಕವಾಗಿ ಹೊಸ ಹೊಸ ಆವಿಷ್ಕಾರಗಳು ನಡೆಯಬೇಕೆಂದು ಪ್ರಧಾನಿ ನರೇಂದ್ರ ಮೋದಿಯವರು ನೀಡಿದ ಕರೆಗೆ ಅನುಗುಣವಾಗಿ ಚಿಂತನಾ ನಾಯಕತ್ವ (Thought Leadership) ವನ್ನು ರೂಪಿಸಲು ಪ್ರತಿಷ್ಠಾನವು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ ಎಂದು ಡಾ. ತೇಜಸ್ವಿನಿ ಅನಂತಕುಮಾರ್ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ತಿಳಿಸಿದರು.

ಆವಿಷ್ಕಾರದಲ್ಲಿ ಸಹಯೋಗ - ಎಲ್ಲರಿಗೂ ಗೆಲುವಿನ ಅವಕಾಶ – ಶೂನ್ಯ ಗಳಿಕೆಯ ಪಂದ್ಯವಲ್ಲ (Colaborative Innovation – Win win for all – Not a zero sum game} ಎಂಬ ವಿಷಯದ ಮೇಲೆ ಅಗ್ರಿಕೊಲಾಬರೇಟರಿ ಸಂಸ್ಥೆಯ ಸ್ಥಾಪಕ ಶ್ರೀ ನಿಪುಣ್ ಮೆಹ್ರೋತ್ರಾ, ಹಿರಿಯ ಪತ್ರಕರ್ತ ಮತ್ತು ಅಂಕಣಕಾರ ಶ್ರೀ ರಾಘವನ್ ಶ್ರೀನಿವಾಸನ್ ಮತ್ತು ಎಐಸಿಟಿಇ ಮುಖ್ಯ ನಿರ್ವಹಣಾಧಿಕಾರಿ ಶ್ರೀ ಬುದ್ಧ ಚಂದ್ರಶೇಖರ್ ಮಾತನಾಡಿದರು. ದೇಶದ ಶೇ 80 ರಷ್ಟು ನೀರನ್ನು ಬಳಸಿಕೊಳ್ಳುವ ಶೇ 50 ರಷ್ಟು ಶ್ರಮಿಕರನ್ನು ತೊಡಗಿಸಿಕೊಳ್ಳುವ ಕೃಷಿ ಕ್ಷೇತ್ರದಲ್ಲಿ ವಾರ್ಷಿಕವಾಗಿ ಸುಮಾರು 92000 ಕೋಟಿ ರೂಪಾಯಿಗಳ ಆಹಾರ ಸಾಮಗ್ರಿ ವ್ಯರ್ಥವಾಗುತ್ತಿದೆ. ಈ ಕ್ಷೇತ್ರದಲ್ಲಿ ಹಣಕಾಸು ಮತ್ತು ಕೌಶಲ್ಯಗಳು ಮುಕ್ತವಾಗಿ ದೊರೆಯುತ್ತಿಲ್ಲ. ಡಿಜಿಟಲ್ ತಂತ್ರಜ್ಞಾನ ಇನ್ನೂ ಈ ಕ್ಷೇತ್ರದಲ್ಲಿ ಸಾಕಷ್ಟು ತೊಡಗಿಕೊಂಡಿಲ್ಲ. ಕೃಷಿಯು ಲಾಭದ ಮೇಲೆ ಗಮನ ಹರಿಸುವುದಕ್ಕಿಂತ ಹೆಚ್ಚಾಗಿ ಸಹಯೋಗದ ಕಡೆ ಹೆಚ್ಚಿನ ಗಮನ ಹರಿಸಬೇಕಾಗಿದೆ.

ಕೃಷಿಕ್ಷೇತ್ರವನ್ನು ಆರ್ಥಿಕವಾಗಿ ಲಾಭಹೀನ ಎಂದು ಪರಿಗಣಿಸುವಂತಿಲ್ಲ. ತಡೆರಹಿತ ಡಿಜಿಟಲ್ ತಂತ್ರಜ್ಞಾನದ ಬಳಕೆಯಿಂದ 270 ರಿಂದ 300 ಬಿಲಿಯನ್ ಡಾಲರುಗಳ ಕ್ಷೇತ್ರದಲ್ಲಿ ವಾರ್ಷಿಕವಾಗಿ 50 ರಿಂದ 70 ಬಿಲಿಯ ಡಾಲರುಗಳ ಹೆಚ್ಚಳವನ್ನು ಸಾಧಿಸಬಹುದಾಗಿದೆ. ಎಂದು ಶ್ರೀ ನಿಪುಣ್ ಮೆಹ್ರೋತ್ರಾ ತಿಳಿಸಿದರು.

ಶ್ರೀ ರಾಘವನ್ ಶ್ರೀನಿವಾಸನ್ ಮಾತನಾಡುತ್ತ ಕೃಷಿಕ್ಷೇತ್ರದ ಸಮಸ್ಯೆಗಳು ಕಳೆದ 25 ವರ್ಷಗಳಿಂದ ಹಾಗೆಯೇ ಉಳಿದುಕೊಂಡು ಬಂದಿವೆ. ಈ ಕ್ಷೇತ್ರದಲ್ಲಿ ಡಿಜಿಟಲ್ ಮೂಲಸೌಕರ್ಯಗಳ ಅಭಿವೃದ್ಧಿಯ ಪ್ರಮಾಣ ತುಂಬ ಕಡಿಮೆಯಿದೆ. ಡಿಜಿಟಲ್ ಕ್ಷೇತ್ರದಲ್ಲಿ ಸರಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಪಾರ ಸಾಧನೆ ಮಾಡಲಾಗಿದೆ. ಯುಪಿಐ, ಆರೋಗ್ಯ ಸೇತು ಮುಂತಾದ ಆವಿಷ್ಕಾರಗಳು ಹಾಗೂ ಕೋವಿಡ್ ಸಮಯದಲ್ಲಿ ನಡೆದ ಆವಿಷ್ಕಾರಗಳು ಇದಕ್ಕೆ ಉತ್ತಮ ಉದಾಹರಣೆ. ಸ್ಪರ್ಧಾತ್ಮಕತೆಯಿಂದ ಸಹಯೋಗದ ಕಡೆ ಮುನ್ನಡೆದಿರುವುದರಿಂದ ಇದು ಸಾಧ್ಯವಾಗಿದೆ. ಒಂದು ಸಾಮಾನ್ಯ ಉದ್ದೇಶಕ್ಕಾಗಿ ಎಲ್ಲರೂ ಒಂದುಗೂಡುವುದು ಇಂದಿನ ಅಗತ್ಯ ಎಂದು ಹೇಳಿದರು.


37 ಲಕ್ಷ ಕೋಟಿ ರೂಪಾಯಿಗಳ ದುಡಿಯುವ ಬಂಡವಾಳ ಹೊಂದಿರುವ ಕೃಷಿಕ್ಷೇತ್ರದಲ್ಲಿ ಸರಕಾರದ ಪಾಲುದಾರಿಕೆ ನಗಣ್ಯವೆಂಬಷ್ಟು ಕಡಿಮೆಯಿದೆ. ಖಾಸಗಿ ಪಾಲುದಾರಿಕೆಯೇ ಅಧಿಕವಾಗಿರುವ ಪರಿಸರವ್ಯವಸ್ಥೆಗೆ ಭಾರತೀಯ ರೈತರು ಒಗ್ಗಿಕೊಂಡಿದ್ದಾರೆ. ಭಾರತದಲ್ಲಿ ಕೋಳಿ ಸಾಕಣೆ, ಮೀನು ಸಾಕಣೆ, ಶ್ವೇತ ಕ್ರಾಂತಿ, ಹಸಿರು ಕ್ರಾಂತಿ ಯಶಸ್ವಿಯಾಗಲು ನವೀನ ಆವಿಷ್ಕಾರಗಳೇ ಕಾರಣ. ಇದು ಸಾಧ್ಯವಾಗಲು ರಾಜಕೀಯದಿಂದ ಹೊರತಾದ ಹೊಸ ಆರ್ಥಿಕ ಮಾದರಿಗಳ ಆವಿಷ್ಕಾರದ ಅಗತ್ಯವಿದೆ ಎಂದೂ ಅವರು ಹೇಳಿದರು.

ನಂತರ ಮಾತನಾಡಿದ ಶ್ರೀ ಬುದ್ಧ ಚಂದ್ರಶೇಖರ್ ಭಾರತದ ಇತಿಹಾಸದಲ್ಲಿ ಸಾವಿರಾರು ವರ್ಷಗಳಿಂದಲೇ ನೂತನ ಆವಿಷ್ಕಾರಗಳು ನಡೆದಿರುವುದನ್ನು ಕಾಣಬಹುದು. ಸೊನ್ನೆ, ದಶಮಾನ ಪದ್ಧತಿ, ಪೈ ಸ್ಥಿರಾಂಕ, ಆಯುರ್ವೇದ, ಫ್ಲಶ್ ಶೌಚಾಲಯ, ಸತುವನ್ನು ಕರಗಿಸುವ ವಿಧಾನ ಮುಂತಾದ ಸಾವಿರಾರು ಆವಿಷ್ಕಾರಗಳನ್ನು ನಮ್ಮ ದೇಶದಲ್ಲಿ ಮಾಡಲಾಗಿದೆ. ಸಹಯೋಗದ ಮೂಲಕ ಆವಿಷ್ಕಾರದ ಗುಣ ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಗತವಾಗಿದೆ. ಎಂದು ಹೇಳಿದರು.

---

ಪುಟ 3 ರಿಂದ

# ಸೋತವನು ಕುಸ್ತಿಪಟುವಾದ




ಇನ್ಸ್ಟಿಟ್ಯೂಟ್ ಪಕ್ಕದ ಜಾಗವೊಂದನ್ನು ಬಳಸಲು ಅನುಮತಿ ಕೊಟ್ಟರು. ಇದಕ್ಕೆ ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯ ಹಿರಿಯ ಪ್ರಾಧ್ಯಾಪಕ ಕೆ.ವಿ. ನಾರಾಯಣ್ ಅವರ ಬೆಂಬಲವೂ ದೊರಕಿತು.

ಗರಡಿಮನೆಗೆ ಮಟ್ಟಿ ಹಾಕಿಸಿದ್ದಾಯಿತು. ಅಂಗಸಾಧನೆಗೆ ಬೇಕಾದ ವಸ್ತುಗಳ ವ್ಯವಸ್ಥೆಯೂ ಆಯಿತು. ಆದರೆ, ಹುಡುಗರು ಗರಡಿ ಸಾಮು, ಕುಸ್ತಿ ಅಭ್ಯಾಸ ಮಾಡುವುದಕ್ಕೆ ಟೈಪ್ ರೈಟಿಂಗ್ ಇನ್ಸ್ಟಿಟ್ಯೂಟಿನ ಮೇಲ್ವಿಚಾರಕರ ಆಕ್ಷೇಪಣೆ ಎದುರಾಯಿತು. ಅವರ ಚಟುವಟಿಕೆಗಳಿಂದ ಟೈಪಿಂಗ್ ಕಲಿಯಲು ಬರುವ ಹುಡುಗಿಯರಿಗೆ ತೊಂದರೆಯಾಗುತ್ತದೆ ಎನ್ನುವುದು ಅವರ ದೂರು. ಕುಸ್ತಿಯ ಅಭ್ಯಾಸದ ವೇಳೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಅವರನ್ನು ಸಮಾಧಾನ ಪಡಿಸಿದ್ದಾಯಿತು. ಇನ್ನೊಂದೆಡೆ ಕುಸ್ತಿಅಭ್ಯಾಸ ಮಾಡಿದ ಮೇಲೆ ಹುಡುಗರು ಪಕ್ಕದಲ್ಲಿದ್ದ ನಲ್ಲಿಯ ಕೆಳಗೆ ಕುಳಿತು ಸ್ನಾನ ಮಾಡಿ ದಣಿವಾರಿಸಿಕೊಂಡು ಬಟ್ಟೆ ಬದಲಿಸಿ ಹೋಗುವ ವ್ಯವಸ್ಥೆ ಮಾಡಿಕೊಂಡಿದ್ದರು. ಅದೇ ಹೊತ್ತಿಗೆ ನಲ್ಲಿಯ ನೀರು ಹಿಡಿಯಲು ಹತ್ತಿರದ ಮನೆಗಳ ಹೆಂಗಸರು ಬರುವುದರಿಂದ ಕುಸ್ತಿಪಟುಗಳಿಗೆ ಅನಾನುಕೂಲವಾಗುತ್ತಿತ್ತು. ಇದನ್ನು ತಪ್ಪಿಸಲು ಹುಡುಗರ ಕುಸ್ತಿ ಅಭ್ಯಾಸ ಮುಗಿಯುವವರೆಗೂ ಹೊರಗಿನವರು ನೀರು ಹಿಡಿಯಲು ಬರತಕ್ಕದ್ದಲ್ಲ ಎಂದು ನಾರಾಯಣ ಶಾಸ್ತ್ರಿಗಳು ಆ ಗೃಹಿಣಿಯರಿಗೆ ಷರತ್ತು ವಿಧಿಸಿಬಿಟ್ಟರು. ಮಾತ್ರವಲ್ಲ, ಆ ಅವಧಿಯಲ್ಲಿ ಹೊರಗಿನವರು ಬಾರದಂತೆ ಗೇಟಿಗೆ ಬೀಗ ಹಾಕಿಸುವ ವ್ಯವಸ್ಥೆಯನ್ನೂ ಮಾಡಿದರು. ಹೀಗೆ ಗೆಳೆಯರ ಬಳಗದ ಅಂಗಸಾಧನೆಗಿದ್ದ ಆತಂಕಗಳು ನಿವಾರಣೆಯಾದವು.

ಪ್ರಾರಂಭದಲ್ಲಿ ವ್ಯಾಯಾಮ, ಅಂಗಸಾಧನೆಗಳಲ್ಲಿ ಮಾತ್ರ ಆಸಕ್ತಿ ತೋರುತ್ತಿದ್ದ ನಾರಾಯಣಶಾಸ್ತ್ರಿಯ ಗಮನ ಕುಸ್ತಿಯ ಕಡೆಗೆ ಹೊರಳುವಂತಾದುದು ಒಂದು ಆಕಸ್ಮಿಕವೇ. ಒಂದು ದಿನ ಗೆಳೆಯರೆಲ್ಲ ಅಂಗಸಾಧನೆ ಮಾಡುತ್ತಿದ್ದ ಸಂದರ್ಭ. ಅವರೊಡನೆ ಕುಸ್ತಿ ಕಲಿಯುತ್ತಿದ್ದವರಲ್ಲಿ ಅಚ್ಯುತರಾವ್ ಎಂಬ ತೆಳ್ಳಗಿನ ಹುಡುಗನೂ ಇದ್ದ.

ಗೆಳೆಯರಿಗೆಲ್ಲ ಏನನ್ನಿಸಿತೋ, ಅಚ್ಯುತರಾವ್ ಜೊತೆಗೆ ಕುಸ್ತಿಮಾಡುವಂತೆ ನಾರಾಯಣ ಶಾಸ್ತ್ರಿಯನ್ನು ಪ್ರೇರಿಸತೊಡಗಿದರು.

ಆವರೆಗೆ ನಾರಾಯಣ ಶಾಸ್ತ್ರಿ ಕುಸ್ತಿಯ ಪಾಠವೊಂದನ್ನೂ ಕಲಿತಿರಲಿಲ್ಲ. ಗೆಳೆಯರೆಲ್ಲ ಒತ್ತಾಯಮಾಡಿದ ಮೇಲೆ ಕುಸ್ತಿಮಾಡಲು ನಿಂತರು. ಬಲಾಢ್ಯ ದೇಹದ ನಾರಾಯಣ ಶಾಸ್ತ್ರಿಯ ಎದುರು ಅಚ್ಯುತರಾವ್ ಸಣಕಲನಾಗಿದ್ದರೂ ಕುಸ್ತಿಯಲ್ಲಿ ಗೆದ್ದುಬಿಟ್ಟ. ಈಗ ಗೆಳೆಯರೆಲ್ಲ ಶಾಸ್ತ್ರಿಯನ್ನು ಛೇಡಿಸತೊಡಗಿದರು. ನಾರಾಯಣ ಶಾಸ್ತ್ರಿ ತನಗಾದ ಸೋಲಿನ ಬಗೆಗೆ ಸಮಜಾಯಿಶಿ ಕೊಡುವುದಕ್ಕಾಗಲಿ ಮತ್ತೇನೋ ವಿವರಿಸುವುದಕ್ಕಾಗಲಿ ಹೋಗಲಿಲ್ಲ. ಆದರೆ, ಈ ಅವಮಾನವನ್ನು ಹೋಗಲಾಡಿಸುವುದಕ್ಕಾಗಿಯಾದರೂ ತಾನು ಕುಸ್ತಿ ಕಲಿಯಲೇಬೇಕೆಂದು ಅಂದೇ ನಿರ್ಧರಿಸಿದರು. ಅಂದಿನಿಂದ ಕುಸ್ತಿಯ ಕಲಿಕೆ ಅವರ ದಿನಚರಿಯ ಇನ್ನೊಂದು ಭಾಗವಾಯಿತು.

(ಮುಂದುವರಿಯುವುದು.....)

## ಗೀತೆಯ ಸಂದೇಶ



ಶ್ರೀ ಕೃಷ್ಣ ಸಂಪಗಾಂವಕರ,
ಶಾಂತಿ ಕುಟೀರ, ಕಣ್ಣೂರು

ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ
ನೈತತ್ತ್ವಯ್ಯುಪಪದ್ಯತೇ ।

ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ
ಪರಂತಪ || (ಅ.2,ಶ್ಲೋ.3)

ಅರ್ಥ:- ಹೇ ಅರ್ಜುನ! ನಿರ್ವೀರ್ಯನಾಗದೆ, ನಿನಗೆ ಅಶೋಭನೀಯವಾದ ಹೃದಯ ದೌರ್ಬಲ್ಯವನ್ನು ತ್ಯಜಿಸಿ (ಯುದ್ಧಕ್ಕಾಗಿ) ಸಜ್ಜಾಗು, ಎದ್ದು ನಿಲ್ಲು.

ಅರ್ಜುನನು ವೀರ-ಶೂರ, ಆದರೆ ಅವನಲ್ಲಿ ಅಕಾರಣ - ಅಸಮಯ - ಅಸಹಜ - ಅಸಮಂಜಸವಾದ ಯುದ್ಧದಿಂದ ಪಲಾಯನ ಮಾಡುವ ಭಾವನೆಯು ಉದಿಸಿದಾಗ ಶ್ರೀಕೃಷ್ಣ ಅರ್ಜುನನಿಗೆ ಹೇಳಿದ ಮಾತಿದು. ಅರ್ಜುನನ ಸ್ವಭಾವ - 'ನ ದೈನ್ಯಂ ನ ಪಲಾಯನಂ'

ಆದರೆ ಈ ರೀತಿ ಯುದ್ಧಭೂಮಿಯಲ್ಲಿ ಬಂದ ಅಹಿತಕಾರಿ ವೈರಾಗ್ಯವನ್ನು ಒಮ್ಮೆಲೇ ಹೊಡೆದು ಹಾಕುವ, ಕ್ಷಾತ್ರತೇಜವನ್ನು ಬಡಿದೆಬ್ಬಿಸುವ ಪ್ರಯತ್ನ. ಯುದ್ಧ ಭೂಮಿಯಲ್ಲಿ ಮಡಿದರೆ ಸ್ವರ್ಗ, ಗೆದ್ದರೆ ರಾಜ್ಯ ಆಳುವೆ ಎಂದು ಹೇಳಿ ಅರ್ಜುನನಿಗೆ ಭರವಸೆಗಳನ್ನು ಕೊಟ್ಟು, ಅವನ ಅನಾರ್ಯ ವಾದಗಳನ್ನು ತರ್ಕದಿಂದ, ಸಮಂಜಸವಾಗಿ ಹೊಡೆದು ಹಾಕಿ, ಕರ್ತವ್ಯ ಪರನಾಗಲು ಪ್ರೇರೇಪಿಸಿದ ವಚನಗಳಿವು. ನಾವೂ ಈ ರೀತಿ ಕರ್ತವ್ಯಚ್ಯುತರಾಗುವ ಸಂದರ್ಭ ಒದಗಿದಾಗ ಇಂತಹ ಆಪ್ತವಾಕ್ಯ ನಮ್ಮನ್ನು ಕರ್ತವ್ಯೋನ್ಮುಖ ಮಾಡುವುದು.

## ತಳವಿರದ ಬಾವಿ!

ನಮ್ಮ ಕ್ಷೇತ್ರದ ಸಂಸದರಾಗಿ ಮಾತ್ರ ಅನಂತಕುಮಾರ್ ನನಗೆ ಪರಿಚಯವಿದ್ದವರು. ನಂತರ ಅವರು ಪ್ರತಿವರ್ಷ ನಡೆಸುತ್ತಿದ್ದ ಅದಮ್ಯ ಚೇತನ ಉತ್ಸವದ ಕಲ್ಪನೆ, ಅಗಾಧತೆ ಮತ್ತು ನಿಷ್ಕೃಷ್ಟತೆಗಳಿಗೆ ನಾನು ಬೆರಗಾಗಿದ್ದೆ. ಹೀಗಾಗಿ ಅವರ ಸ್ಮರಣಾರ್ಥ ನಡೆದ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿದ್ದೆ. ನಂತರ ಕೋವಿಡ್ ಮಹಾಮಾರಿಯ ಸಂದರ್ಭದಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ನನಗೆ ಅದಮ್ಯ ಚೇತನ ಸಂಸ್ಥೆಯು ನೀಡಿತು. ಅಲ್ಲಿಂದ ಮುಂದೆ ಅನಂತಕುಮಾರ್ ಪ್ರತಿಷ್ಠಾನವು ಪ್ರಕಟಿಸುತ್ತಿರುವ ಅನಂತ ಪಥ ಮಾಸಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯನಾಗಿ ಕೆಲಸಮಾಡುವ ಅವಕಾಶ ದೊರೆತಿರುವುದು ಒಂದು ಅಪೂರ್ವ ಬೋನಸ್. ಒಬ್ಬ ವ್ಯಕ್ತಿಯ ಬಗ್ಗೆ ಎಷ್ಟು ಬರೆಯಬಹುದು ಎಂದು ಪ್ರಾರಂಭದಲ್ಲಿ ನನಗೆ ಅನುಮಾನವಿತ್ತು. ಹತ್ತು ಹನ್ನೆರಡು ಸಂಚಿಕೆಗಳಿಗೆ ಸಾಕಾಗುವಷ್ಟು ವಿಷಯ ನಮ್ಮಲ್ಲಿದೆ ಎಂಬ ವಿಶ್ವಾಸದೊಂದಿಗೆ ಪ್ರಾರಂಭಿಸಿದೆವು. ಆದರೆ ಈಗ ನೋಡಿದರೆ ಅನಂತಕುಮಾರರ ಜೀವನ ತಳವಿರದ ಬಾವಿ! ಇಪ್ಪತ್ತೇಳು ಸಂಚಿಕೆಗಳನ್ನೂ ತುಂಬಿಸಿ ಮುನ್ನುಗ್ಗುತ್ತಿದೆ.

ಅನಂತಕುಮಾರರು ಪ್ರತಿದಿನದ ಅಚ್ಚರಿ. ನಾಯಕತ್ವಕ್ಕೆ ಮಾದರಿಯಾಗಲೆಂದೇ ಬಾಳಿ ಮರೆಯಾದವರು. ದೇಶದ ಪ್ರತಿಯೊಬ್ಬರಿಗೂ ಅವರ ಬಗ್ಗೆ ಹೇಳುವುದಿದೆ. ಅವರ ಮಾತುಗಳಿಗೆ ಅಕ್ಷರ ರೂಪ ಕೊಡುವ ಕೆಲಸವನ್ನು ಅನಂತ ಪಥ ಮಾಡಲಿದೆ. ಅನಂತ ಕುಮಾರರ ವ್ಯಕ್ತಿತ್ವ ಮತ್ತು ಸಾಧನೆಗಳ ಜೊತೆಗೆ ಅವರು ಪ್ರತಿಪಾದಿಸಿದ ಮೌಲ್ಯಗಳ ಬಗ್ಗೆಯೂ ಪತ್ರಿಕೆಯಲ್ಲಿ ಬರಹಗಳು ಬರುತ್ತಿವೆ. ದೇಶದ ಭವಿಷ್ಯದ ಕುರಿತು "ದೇಶ ಮೊದಲು ಸಂವಾದ" ಕಾರ್ಯಕ್ರಮದ ಲೇಖನಗಳು, ಸಾಂಸ್ಕೃತಿಕ ವೈಭವದ ಕುರಿತು "ದೇಗುಲ ದರ್ಶನ" ಆದರ್ಶ ವ್ಯಕ್ತಿಗಳ "ವ್ಯಕ್ತಿ ವಿಶೇಷ ಮಾಲಿಕೆ" ಹಸಿರು ಜೀವನ ಶೈಲಿಗೆ ಪೂರಕವಾದ "ಸಸ್ಯಲೋಕ" ಮುಂತಾದ ಮೌಲಿಕ ಬರಹಗಳನ್ನೊಳಗೊಂಡು ಸಂಗ್ರಹಯೋಗ್ಯ ಪತ್ರಿಕೆಯಾಗಿ ತಿಂಗಳಿನಿಂದ ತಿಂಗಳಿಗೆ ಮೈತುಂಬಿಕೊಳ್ಳುತ್ತ ನಿಯಮಿತವಾಗಿ ಪ್ರಕಟವಾಗುತ್ತಿದೆ. ಪತ್ರಿಕೆಯ ಸಂಪಾದಕತ್ವ ನನಗೆ ಹೊಸದಲ್ಲವಾದರೂ ಸಂಪಾದಕರಾದ ಟಿ ಎಸ್ ಗೋಪಾಲರ ಜೊತೆ ಕೆಲಸ ಮಾಡುವುದು ವಿಶೇಷ ಅನುಭವ. ಅವರ ಓದಿನ ಹರಹು, ಪತ್ರಿಕಾ ವಿನ್ಯಾಸದ ಕುರಿತ ಆಸ್ಥೆ, ಎಂಥವರಿಂದಲೂ ಕೆಲಸ ಮಾಡಿಸಿಕೊಳ್ಳುವ ಸಾಮರ್ಥ್ಯ, ಪ್ರೋತ್ಸಾಹ ನೀಡುವ ಪ್ರವೃತ್ತಿ, ನಿಷ್ಠುರವಾದ ಸಮಯ ಪಾಲನೆ ಮುಂತಾದ ಎಲ್ಲವೂ ಪತ್ರಿಕೆಯ ಯಶಸ್ಸಿಗೆ ಕಾರಣ.

**- ಕೆ. ಜನಾರ್ದನ ತುಂಗ**

## ಅರಿವಿನ ವಿಸ್ತರಣೆ

'ಅನಂತಪಥ' ಪತ್ರಿಕೆಯನ್ನು ಮೊದಲ ಸಂಚಿಕೆಯಿಂದಲೂ ಓದುತ್ತ ಬಂದಿದ್ದೇನೆ. ಓದುಗರ ಅರಿವಿನ ಕಕ್ಷೆಯನ್ನು ವಿಸ್ತರಿಸುತ್ತ ಬಂದಿರುವ ಪತ್ರಿಕೆಯಿದು. ನಾಡಿನ ಅಗ್ರಗಣ್ಯ ನಾಯಕರಾಗಿ ಬೆಳೆದ ದಿವಂಗತ ಅನಂತಕುಮಾರರ ಜೀವನಚಿತ್ರವನ್ನು ಉತ್ಪ್ರೇಕ್ಷೆಗಳಿಲ್ಲದೆ ಪತ್ರಿಕೆ ನೀಡುತ್ತಿರುವ ಬಗೆ ನನಗೆ ಸಂತಸ ನೀಡಿದೆ. ನಿಯಮಿತವಾಗಿ ಅಂಚೆ ಮೂಲಕ ಕೈ ಸೇರುವ ಈ ಪತ್ರಿಕೆಯು ಪ್ರಕಟಿಸುತ್ತಿರುವ ಸಾಮಾಜಿಕ ಕಾಳಜಿ, ಪ್ರತಿಷ್ಠಾನದ ಚಟುವಟಿಕೆಗಳು, ವಿಚಾರಪೂರ್ಣ ಬರಹಗಳು. ಪ್ರತಿಯೊಂದನ್ನೂ ಗಮನಿಸುತ್ತ ಬಂದಿರುವೆ. ಈ ಪಥಕ್ಕೆ ಸಮರ್ಥ ಸಂಪಾದಕವರ್ಗದ ಮಾರ್ಗದರ್ಶನವಿದೆ. ಮುಂದಿನ ಪಯಣಕ್ಕೆ ಹಾರ್ದಿಕ ಶುಭಾಶಯಗಳು.

**- ಡಾ. ಚಿಂತಾಮಣಿ ಕೊಡ್ಲೆಕೆರೆ**

## ಹಸಿವಿಗೆ ಪರಿಹಾರ

ಹಸಿವಿನ ಬೆಲೆ, ಹಸಿದವನಿಗೆ ಮಾತ್ರ ಗೊತ್ತು. ಆ ಹೇಳಲಾಗದ ಹಸಿವಿನ ಶಾಪ ಹೋಗಲಾಡಿಸಿದ ಅದಮ್ಯ ಚೇತನಕ್ಕೆ ನಾವು ಎಂದು ಎಂದಿಗೂ ಚಿರಋಣಿ. ಪೌಷ್ಟಿಕ, ರುಚಿಕರ, ಹಾಗೂ ಸ್ವಚ್ಛ ಊಟ ನೀಡಿ ಮಕ್ಕಳ ಹಸಿವನ್ನು ನೀಗಿಸುತ್ತಿರುವ ಅದಮ್ಯ ಚೇತನ ಮತ್ತಷ್ಟು ಮಕ್ಕಳ ಆಸರೆಯಾಗಲಿ. ಊಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಡೆಸುತ್ತಿರುವ ನಮ್ಮ ತೇಜಸ್ವಿನಿ ಮೇಡಂ ರವರಿಗೆ ಹೃತ್ಪೂರ್ವಕವಾದ ಧನ್ಯವಾದಗಳು.

**- ಶಾಝಿಯಾ, ವಿಜಯಾ ಕಾಲೇಜು ವಿದ್ಯಾರ್ಥಿನಿ**

ಆನೇಕಲ್ ತಾಲೂಕಿನ ಇಂಡ್ಲವಾಡಿ ಗ್ರಾಮದಿಂದ ವಿಜಯಾ ಕಾಲೇಜಿಗೆ ಬರಲು ನನಗೆ 2 ಗಂಟೆ ಸಮಯ ಬೇಕಾಗುತ್ತದೆ. ಆ ಸಮಯದಲ್ಲಿ ಬೆಳಗ್ಗಿನ ತಿಂಡಿ, ಹಾಗೂ ಮಧ್ಯಾಹ್ನದ ಊಟದ ಬಾಕ್ಸ್ ತರಲು ಸಾಧ್ಯವಾಗುವುದಿಲ್ಲ. ಎಷ್ಟು ಬಾರಿ ಕಾಲೇಜಿನಿಂದ ಮನೆಗೆ ಹಸಿವಿನಲ್ಲಿಯೇ ಹೋಗಿದ್ದೇನೆ. ಆದರೆ ಅದಮ್ಯ ಚೇತನವು ಮಧ್ಯಾಹ್ನದ ರುಚಿಕರವಾದ ಬಿಸಿ ಊಟ ನೀಡುತ್ತಿರುವುದರಿಂದ ಮನೆಗೆ ಹಸಿವಿಲ್ಲದೇ ಖುಷಿಯಿಂದ ಹೋಗುತ್ತಿದ್ದೇನೆ.

**- ಚಂದ್ರಶೇಖರ್, ವಿಜಯಾ ಕಾಲೇಜು ವಿದ್ಯಾರ್ಥಿ**

## ದೇಗುಲ ದರ್ಶನ ಸಾರ್ಥಕ

ದೇವಾಲಯಗಳು ಮತ್ತು ಸ್ಮಾರಕಗಳನ್ನು ತಾವಿರುವ ಎಡೆಯಲ್ಲಿಯೇ ಈ ಕಾರ್ಯಕ್ರಮಗಳ ಮೂಲಕ ಪರಿಚಯ ಮಾಡಿಕೊಳ್ಳುತ್ತಿರುವ ಆಸಕ್ತರು ಸಮಯ ಸಿಕ್ಕಾಗ ಅವುಗಳಿಗೆ ಭೇಟಿ ಕೊಟ್ಟು ಕಣ್ತುಂಬಿಸಿಕೊಳ್ಳುತ್ತಿದ್ದಾರೆ. ಇಂತಹ ಮಹತ್ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಯ ಅಧ್ಯಕ್ಷರು, ಸಂಚಾಲಕರು, ನಿರೂಪಕರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ದೇಗುಲ ದರ್ಶನದಂತಹ ಕಾರ್ಯಕ್ರಮಗಳು ಯುವಜನರು ಮತ್ತು ಮಕ್ಕಳಲ್ಲಿ ಆಸಕ್ತಿಯನ್ನು ಕೆರಳಿಸಿ ಇತಿಹಾಸ ಮತ್ತು ಪರಂಪರೆಯನ್ನು ಉಳಿಸಿಕೊಳ್ಳುವ ಕೆಚ್ಚನ್ನು ತಂದರೆ ನಿಜಕ್ಕೂ ಸಾರ್ಥಕವೆನ್ನಬಹುದು.

**- ಶಶಿಧರ್ ಎಚ್.ಜಿ. ಬೆಂಗಳೂರು.**

ದೇವಾಲಯಗಳೇ ಭಕ್ತಿಯ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿದ್ದವು ಎಂದು ತಿಳಿದಿದ್ದೇವೆ ಹಾಗೂ ದೇಶದ ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಹೆಸರಿಗೆ ತಕ್ಕಂತೆ ಅಸಾಧಾರಣ ಚೈತನ್ಯವನ್ನು ಹೊಂದಿರುವ "ಅದಮ್ಯ ಚೇತನ"ದ ಕಾರ್ಯ ಸ್ತುತ್ಯರ್ಹ. ಜಿಲ್ಲಾವಾರು ದೇವಾಲಯಗಳನ್ನು ಪರಿಚಯಿಸುತ್ತಿರುವ ಗೋಪಾಲರವರು ತಮ್ಮ ಸರಳವಾದ ಭಾಷೆಯಿಂದ, ನಮ್ಮ ಮನೆಯ ಪಕ್ಕಕ್ಕೇ ಆ ದೇಗುಲಗಳನ್ನು ತಂದಂತಿರುತ್ತದೆ. ಇನ್ನು ಚಕ್ರಪಾಣಿಯವರದು ಮನೋಜ್ಞ ವಿವರಣೆಗಳು, ದೇವಾಲಯಗಳನ್ನು ಯಾವ ರೀತಿ ವೀಕ್ಷಿಸಬೇಕು, ಏನೇನು ಸೂಕ್ಷ್ಮತೆಗಳಿರುತ್ತವೆ, ಅಲಂಕಾರಗಳು, ಯಾವ ಯಾವ ದೇವ-ದೇವತೆ ಎಂಬುದನ್ನು ಅವರಿಂದಲೇ ತಿಳಿಯಬೇಕು. ಒಟ್ಟಿನಲ್ಲಿ ತುಂಬ ಒಳ್ಳೆಯ ಕಾರ್ಯಕ್ರಮ. ಒಮ್ಮೆಯಾದರೂ ಪ್ರತ್ಯಕ್ಷ ಹೋಗಿ ನೋಡಲೇ ಬೇಕೆಂದು ಹಂಬಲ ಮೂಡುತ್ತದೆ. ಕಾರ್ಯಕ್ರಮದ ಉದ್ದೇಶ ಖಂಡಿತವಾಗಿ ಈಡೇರಿದೆ ಎಂಬುದು ನನ್ನ ಅನಿಸಿಕೆ.

**- ಸೋಮಶೇಖರ್ ಬಿ.ಆರ್., ಬೆಂಗಳೂರು.**

### ಪ್ರಕೃತಿ ವಿಕೋಪದ ಸಂತ್ರಸ್ತರಿಗೆ ಅದಮ್ಯ ಚೇತನದ ಸಹಾಯಹಸ್ತ



ಬೆಂಗಳೂರು ಸಿಲಿಕಾನ್ ಸಿಟಿಯಲ್ಲಿ ಇತ್ತೀಚಿಗೆ ಸುರಿದ ಭಾರಿ ಮಳೆಯಿಂದ ಆತಂಕಕೀಡಾದ ಸಂತ್ರಸ್ತರಿಗೆ ಬಿಬಿಎಂಪಿ ಕೋರಿಕೆಯ ಮೇರೆಗೆ, ಸತತ ಏಳು ದಿನ ಒಟ್ಟು 42000 ಜನರಿಗೆ ಬಿಸಿ ಊಟವನ್ನು ಕಳುಹಿಸಲಾಯಿತು. ಈ ಕಾರ್ಯಕ್ಕೆ ಸಂಸ್ಥೆಯ ಅನೇಕ ಕಾರ್ಯಕರ್ತರು, ಸಿಬ್ಬಂದಿಗಳು ಕೈ ಜೋಡಿಸಿದರು.

### ಗಣ್ಯರ ಭೇಟಿ

ಅನಂತ ಪ್ರೇರಣಾ ಕೇಂದ್ರಕ್ಕೆ ದೆಹಲಿಯ ಬಿಜೆಪಿಯ ಪ್ರಶಿಕ್ಷಣ ವಿಭಾಗದ ಪ್ರಭಾರಿ ಹಾಗೂ ಕಾರ್ಯಕರ್ತರಾದ ಶ್ರೀ ಅರವಿಂದ ಸಿಂಗ್ ಭೇಟಿ ನೀಡಿದರು. ಅವರು ನಂತರ ಮಾತನಾಡುತ್ತ, "ಇಂದು ಅನಂತಕುಮಾರ್ ಭೌತಿಕವಾಗಿ ನಮ್ಮ ಜೊತೆ ಇಲ್ಲದಿರಬಹುದು, ಆದರೆ ತಮ್ಮ ಸಾಧನೆಗಳ ಮೂಲಕ ಅಮರರಾಗಿದ್ದಾರೆ. ಅವರ ಸಮಾಜಸೇವೆಯ ನಿದರ್ಶನಗಳು ಸಹಸ್ರಾರು ಕಾರ್ಯಕರ್ತರಿಗೆ ಪ್ರೇರಣೆ ನೀಡುತ್ತವೆ" ಎಂದು ಹೇಳಿದರು.

ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ನಿಯುಕ್ತರಾಗಿರುವ ನ್ಯಾ|| ಚಂದ್ರಶೇಖರ ಜೋಷಿ ಹಾಗೂ ಇತರ ಗಣ್ಯರು ಅದಮ್ಯಚೇತನಕ್ಕೆ ಭೇಟಿ ನೀಡಿ ನಂತರ ಅವರ ಗೌರವಾರ್ಥ ಏರ್ಪಡಿಸಿದ ಔತಣ ಕೂಟದಲ್ಲಿ ಪಾಲ್ಗೊಂಡರು. ಅವರು ಅದೇ ದಿನ ಸಂಜೆ ಅನಂತ ಪ್ರೇರಣಾ ಕೇಂದ್ರಕ್ಕೂ ಭೇಟಿ ನೀಡಿದ್ದರು.

ವಿದ್ಯಾಭಾರತಿ ಸಂಸ್ಥೆಯ ಅಖಿಲ ಭಾರತ ಜಂಟಿ ಕಾರ್ಯದರ್ಶಿ, ಡಾ. ನಂದಿನಿ ಲಕ್ಷ್ಮೀಕಾಂತ, ಬಿಜೆಪಿ ಪ್ರಮುಖರಾದ ಶ್ರೀ ಸದಾಶಿವಯ್ಯ, ಶ್ರೀ ಕೃಷ್ಣಮೂರ್ತಿ ಮತ್ತು ಶ್ರೀ ಮಂಜುನಾಥ್ (ಪ್ರಧಾನ ಕಾರ್ಯದರ್ಶಿ) ಮುಂತಾದವರು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿ ಕೇಂದ್ರದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಅದಮ್ಯ ಚೇತನದ ಕಾರ್ಯಕರ್ತರೂ ಸಂಸ್ಥೆಯ ಹಿತೈಷಿಗಳೂ ಆಗಿರುವ ಶ್ರೀ ಅರುಣ್ ಕುಮಾರ್ ದಂಪತಿಗಳು ಮತ್ತು ಶ್ರೀಮತಿ ಶಾರದಾ ಪ್ರಕಾಶ್ ಕೂಡ ಕೇಂದ್ರಕ್ಕೆ ಭೇಟಿ ನೀಡಿದರು.

ಡಾ. ವಿ. ಡಿ. ಮೈತ್ರಿ, ಶ್ರೀ ಪ್ರದೀಪ್ ಓಕ್ (ಅದಮ್ಯ ಚೇತನದ ಟ್ರಸ್ಟೀ) ಗುಜರಾತಿನ ವಿದ್ಯಾರ್ಥಿಗಳ ಛಾತ್ರ ಸಂಸದ್ ಎಂಬ ವಿಶಿಷ್ಟ ಸಂಸ್ಥೆಯ ಸದಸ್ಯರು, ಯುವರ್ಸ್ ಟ್ರಲ್ಸ್ ಇಂಡಿಯಾ ಪ್ರತಿನಿಧಿಗಳು, ಹುಬ್ಬಳ್ಳಿಯ ಶ್ರೀನಿವಾಸ್ ಪಾಟೀಲ್ ಮತ್ತು ಕುಟುಂಬದವರು ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯ ರಜತ್ ದೇಸಾಯಿ ಮತ್ತು ಅವರ ತಂಡದ ಸದಸ್ಯರು ಅದಮ್ಯ ಚೇತನಕ್ಕೆ ಭೇಟಿ ನೀಡಿದರು.

**ಅನಂತ ಪ್ರೇರಣಾ ಕೇಂದ್ರಕ್ಕೆ ಮಕ್ಕಳ ಭೇಟಿ-** ಅನಂತ ಪ್ರೇರಣಾ ಕೇಂದ್ರದಕ್ಕೆ ಬಿಸಿಯೂಟದ ಶಾಲೆಗಳಾದ ಶ್ರೀ ಕುಮಾರಸ್ವಾಮಿ ವಿದ್ಯಾಮಂದಿರ, ಭಾರತಮಾತಾ ವಿದ್ಯಾ ಮಂದಿರ, ಆರ್.ವಿ. ರಸ್ತೆಯ ಬಿ.ಎಚ್.ಎಸ್, ವಿಜಯನಗರದ ವಾಸವಿ ವಿದ್ಯಾನಿಕೇತನ, ವಿಜಯನಗರದ ಬಿಎಸ್‌ವಿಪಿ, ಅತ್ತಿಗುಪ್ಪೆಯ ಶ್ರೀ ಲಕ್ಷ್ಮೀ ನರಸಿಂಹ ಪ್ರೌಢಶಾಲೆ, ಶ್ರೀ ಲಾಲ್ ಬಹದ್ದೂರ್ ಶಾಸ್ತ್ರೀ ಪ್ರೌಢಶಾಲೆ, ಭಾರತಮಾತಾ ಬಾಲಕಿಯರ ಪ್ರೌಢಶಾಲೆ ಮುಂತಾದ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಜೊತೆಗೆ ಜಯನಗರದ ಗೀತಾ ಸ್ಕೂಲ್, ಸಾರಕ್ಕಿ ಸರಕಾರಿ ಶಾಲೆಯ ವಿದ್ಯಾರ್ಥಿಗಳು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿ ಅನಂತಕುಮಾರ್ ಅವರ ಜೀವನ ಹಾಗೂ ಮೈಕ್ರೋ ಪ್ಲಾಸ್ಟಿಕ್‌ನಿಂದ ಪರಿಸರದ ಮೇಲೆ ಉಂಟಾಗುತ್ತಿರುವ ಪರಿಣಾಮಗಳ ಬಗ್ಗೆ ಅರಿವು ಮೂಡಿಸಿಕೊಂಡರು. ಶಾಲಾ ಮಕ್ಕಳಿಗೆ ಬಿಸಿ ಹಾಲು ಮತ್ತು ಭೋಜನ ವ್ಯವಸ್ಥೆಯನ್ನು ಅದಮ್ಯ ಚೇತನದಿಂದ ಏರ್ಪಡಿಸಲಾಗಿತ್ತು.

**ಹಸಿರು ಭಾನುವಾರ-** ಅದಮ್ಯ ಚೇತನದ "ಹಸಿರು ಭಾನುವಾರ" ಗಿಡನೆಡುವ ಕಾರ್ಯಕ್ರಮದಲ್ಲಿ ಅನೇಕ ಹೊಸ ಸ್ವಯಂಸೇವಕರು ತೊಡಗಿಕೊಳ್ಳುತ್ತಿರುವುದು ಸ್ವಾಗತಾರ್ಹ.

# ಅದಮ್ಯಚೇತನ ತಿಂಗಳ ವರದಿ

## (15 ಆಗಸ್ಟ್ 2022 ರಿಂದ 15 ಸೆಪ್ಟೆಂಬರ್ 2022)

347 ಮತ್ತು 348 ಹಸಿರು ಭಾನುವಾರಗಳನ್ನು ಕ್ರಮವಾಗಿ ಗವಿಪುರದ ಕೆಂಪಾಂಬುಧಿ ಕೆರೆಯ ಆವರಣ ಹಾಗೂ ಬಸವನಗುಡಿಯ ಸರ್ಕಾರಿ ಬಾಲಕರ ಶಾಲೆಯ ಅನಂತವನದಲ್ಲಿ ಆಯೋಜಿಸಲಾಗಿತ್ತು. 349 ಮತ್ತು 350 ಹಸಿರು ಭಾನುವಾರಗಳನ್ನು ಕ್ರಮವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಗಾಂಧಿ ಸಂಶೋಧನಾ ಕೇಂದ್ರ ಹಾಗೂ ಬೆಂಗಳೂರಿನ 131ನೇ ವಾರ್ಡಿನ ಇಂದಿರಾ ಕ್ಯಾಂಟೀನ್ ಹತ್ತಿರ ನಡೆಸಲಾಯಿತು. ಸಾಗರದ ಪ್ರಗತಿ ನಗರದಲ್ಲಿ, ಬಳ್ಳಾರಿಯಲ್ಲಿ (150 ಮತ್ತು 151) ಹಾಗೂ ರಾಯಚೂರಿನಲ್ಲಿ (311, 312, 313, 314, 315 ಮತ್ತು 316) ಹಸಿರು ಭಾನುವಾರಗಳು ಸ್ವಯಂಸೇವಾ ಸಂಸ್ಥೆಗಳ ಸಹಯೋಗದಿಂದ ಯಶಸ್ವಿಯಾಗಿ ನಡೆದವು.

**ಪ್ಲೇಟ್ ಬ್ಯಾಂಕ್-** ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿತವಾಗಿದ್ದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ನಡೆದ ರಾಷ್ಟ್ರ ಜಾಗೃತಿ ಅಭಿಯಾನ ಕಾರ್ಯಕ್ರಮಕ್ಕೆ ಅದಮ್ಯ ಚೇತನದಿಂದ ಪ್ಲೇಟ್ ಬ್ಯಾಂಕ್ ಸೌಲಭ್ಯ ಒದಗಿಸಲಾಗಿತ್ತು. ಮಾರತ್‌ಹಳ್ಳಿಯ ಸಿಎಂಆರ್ ವಿವಿಯಲ್ಲಿ ನಡೆದ ಶಿಬಿರದಲ್ಲಿಯೂ ಅದಮ್ಯ ಚೇತನದ ಪ್ಲೇಟ್ ಬ್ಯಾಂಕ್ ನೆರವನ್ನು ಪಡೆಯಲಾಗಿತ್ತು..

**ಊಟದ ತಟ್ಟೆ ವಿತರಣೆ-** ಕಳೆದ ಕೆಲವು ತಿಂಗಳುಗಳಿಂದ ಅದಮ್ಯ ಚೇತನ ವತಿಯಿಂದ ಪೌರಕಾರ್ಮಿಕರಿಗೆ ಊಟದ ತಟ್ಟೆಗಳನ್ನು ವಿತರಿಸಲಾಗುತ್ತಿದ್ದು ಈ ತಿಂಗಳು ಮಹಾದೇವಪುರ ವಲಯದ ದೊಡ್ಡ ನೆಕ್ಕುಂದಿ, ಹೂಡಿ, ಗರುಡಾಚಾರ್ ಪಾಳ್ಯ, ಭೈರತಿ, ಬೆಳ್ಳಂದೂರು ಪ್ರದೇಶಗಳಲ್ಲಿ ವಿತರಿಸಲಾಯಿತು.

**ನಿತ್ಯ ಅನ್ನದಾನ-** ಅದಮ್ಯ ಚೇತನವು ನಗರದ ಬೇರೆ ಬೇರೆ ಬಡಾವಣೆಗಳಲ್ಲಿನ ಅಶಕ್ತರಿಗೆ ಅನ್ನದಾನ ಕಾರ್ಯಕ್ರಮವನ್ನು 19/11/2019ರಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದು 15 ಸಪ್ಟೆಂಬರ್ 2022ರ ವರೆಗೆ ಗವಿಪುರದಲ್ಲಿ 99600, ಜಯನಗರದಲ್ಲಿ 64000, ನಗರ್ತಪೇಟೆಯಲ್ಲಿ 66600 ಜನರು ಹಾಗೂ ಸೌತ್ ಎಂಡ್ ವೃತ್ತದ ಅನಂತ ಪ್ರೇರಣಾ ಕೇಂದ್ರದಲ್ಲಿ 7050 ಶಾಲಾಕಾಲೇಜು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ.

**ಶ್ರೀ ಚೇತನ ಸಭೆ-** ಕಳೆದು ಎರಡು ವರ್ಷಗಳಿಂದ ಶ್ರೀ ಚೇತನ ಸಭೆಯನ್ನು ಗೂಗಲ್ ಮೀಟ್ ಜಾಲತಾಣದಲ್ಲಿ ನಡೆಸುತ್ತಿದ್ದು, ಪ್ರತಿ ಮಂಗಳವಾರ ಮಧ್ಯಾಹ್ನ 12ಕ್ಕೆ ಪ್ರಾರ್ಥನೆಯಿಂದ ಪ್ರಾರಂಭವಾಗಿ 1.30ರ ವರೆಗೆ ನಡೆಯುವ ಈ ಸಭೆಯಲ್ಲಿ ದೇಶಭಕ್ತಿ ಗೀತೆ, ವಾರದ ಸುದ್ದಿ, ಕವಿನಮನ ಮತ್ತು ಒಂದೊಂದು ಆರೋಗ್ಯಕರ ಅಡುಗೆಯ ಬಗ್ಗೆ ಪರಿಚಯ ಮುಂತಾದ ಕಾರ್ಯಕ್ರಮಗಳು ನಡೆದವು.

**ಭಗವದ್ಗೀತೆ ಪಠಣ-** ಭಗವದ್ಗೀತೆಯ ಸಂದೇಶಗಳನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳುವ ದೃಷ್ಟಿಯಿಂದ ಪ್ರತಿ ಗುರುವಾರ ಸಂಜೆ 4ರಿಂದ 5 ಗಂಟೆಯವರೆಗೆ ಭಗವದ್ಗೀತೆಯ ಶ್ಲೋಕಗಳ ಪಠಣವನ್ನು ಅದಮ್ಯ ಚೇತನದ ಆವರಣದಲ್ಲಿ ನಡೆಸಲಾಯಿತು. ಪಠಣದಲ್ಲಿ ಭಾಗವಹಿಸಿದ ಎಲ್ಲರೂ ನಂತರ ಅಡುಗೆ ಮನೆಯ ಸೇವಾಕಾರ್ಯಗಳಲ್ಲಿ ಕೈಜೋಡಿಸಿದರು.

### ಶುಭಾಶಯ

ಅನಂತಪಥ ಎಂಬ ಸುಂದರ ಹೆಸರನ್ನು ಹೊಂದಿದ ಮಾಸಪತ್ರಿಕೆ ಆರಂಭವಾಗಿ ಎರಡು ವರ್ಷಗಳಾಗುತ್ತಾ ಬಂದಿದೆ. ಚಂದಾದಾರನಾಗಿರುವ ನನಗೆ ಆರಂಭದಿಂದಲೂ ಪತ್ರಿಕೆಯ ಪ್ರತಿಯು ತಪ್ಪದೇ ಮನೆ ವಿಳಾಸಕ್ಕೆ ಬರುತ್ತದೆ ಮತ್ತು ವಾಟ್ಸಪ್ ಮೂಲಕವೂ ಸಿಗುತ್ತದೆ. ರಾಷ್ಟ್ರಭಕ್ತಿಯ ವಿಚಾರ, ಅನಂತಕುಮಾರರ ಹಲವು ಸಾಧನೆಗಳು ಹಾಗೂ ನಡೆದುಬಂದ ದಾರಿ, ಅವರ ಧ್ಯೇಯ ಅಲ್ಲದೇ ಇನ್ನೂ ಅನೇಕ ವಿಚಾರಗಳನ್ನು ಈ ಪತ್ರಿಕೆ ತಿಳಿಸಿಕೊಡುತ್ತದೆ. ನಾಡಿನ ಹೆಸರಾಂತ ಲೇಖಕರ ಲೇಖನಗಳು ಓದಲು ಇಲ್ಲಿ ದೊರೆಯುತ್ತವೆ. ರಾಜಕೀಯದ ಸೋಂಕಿಲ್ಲದ, ಕೇವಲ ರಾಷ್ಟ್ರೋತ್ಥಾನದ ಬಗ್ಗೆ ಚರ್ಚಿಸುವ ಕೆಲವೇ ಪತ್ರಿಕೆಗಳಲ್ಲಿ 'ಅನಂತಪಥ' ಮುಂಚೂಣಿಯಲ್ಲಿದೆ. ಅನಂತ ಕುಮಾರ್ ಪ್ರತಿಷ್ಠಾನದ ಮೂಲಕ ಹೊರಬರುತ್ತಿರುವ ಈ ಪತ್ರಿಕೆ ಇನ್ನೂ ಹೆಚ್ಚು ಬೆಳೆದು ಸಕಲ ಜನರನ್ನು ತಲುಪಲಿ ಎಂದು ಆಶಿಸುತ್ತೇನೆ.

**- ವೈ.ವಿ. ಶರದ್, ಉಪಕಾರ್ ಬಡಾವಣೆ**

## ಅದಮ್ಯ ಸೇವಾ

( ಅದಮ್ಯ ಚೇತನ -ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )




ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ ಜೋಶಿಯವರನ್ನು ಅದಮ್ಯ ಚೇತನ ಸನ್ಮಾನಿಸಿತು. ಜೊತೆಯಲ್ಲಿ ಶ್ರೀ ಗೋವಿಂದ ಕಾರಜೋಳ ಮತ್ತು ಡಾ. ಪಿ ವಿ ಕೃಷ್ಣ ಭಟ್ ಮತ್ತು ತೇಜಸ್ವಿನಿ ಅನಂತಕುಮಾರ್



ಬಿಜೆಪಿಯ ಹಿರಿಯ ಕಾರ್ಯಕರ್ತ ಹಾಗೂ ದೆಹಲಿ ಪ್ರಶಿಕ್ಷಣ ವಿಭಾಗದ ಪ್ರಭಾರಿ ಅರವಿಂದ ಸಿಂಗ್ ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದರು



ಕರ್ನಾಟಕ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷರಾದ ಶ್ರೀ ನೆ ಲ ನರೇಂದ್ರ ಬಾಬು ಜೋಧಪುರದ ಅಡುಗೆ ಮನೆಗೆ ಭೇಟಿ ನೀಡಿದ ಸಂದರ್ಭ



ಸಸ್ಯಾಗ್ರಹದ ರೂವಾರಿ ಅನಂತಕುಮಾರರ ನೆನಪಿನಲ್ಲಿ ವಿಶ್ವ ಕೈತೋಟದ ದಿನದಂದು ಪರಿಸರವಾದಿ ಶ್ರೀ ವಿ. ರಾಮಪ್ರಸಾದ್ ಅವರಿಗೆ ಸನ್ಮಾನ



ಲಂಡನ್ನಿನ ಕಿಂಗ್ಸ್ ಕಾಲೇಜಿನ ಪ್ರಾಧ್ಯಾಪಕ, ಡಾ. ಆಲಿಸ್ ಇವಾನ್ಸ್ ಅವರಿಂದ ಅದಮ್ಯ ಚೇತನದ ಭೇಟಿ



ಹಸಿರು ಭಾನುವಾರದಲ್ಲಿ ಡಾ. ತೇಜಸ್ವಿನಿಯವರ ಜೊತೆ ಬಿಎನ್‌ಎಂಐಟಿ ಕಾಲೇಜಿನ ಇಂಟರ್ನ್ ವಿದ್ಯಾರ್ಥಿಗಳು



ಅದಮ್ಯ ಚೇತನ ಸಂಸ್ಥೆಯ ಕಚೇರಿಯಲ್ಲಿ ವೈಭವದ ಗೌರಿ-ಗಣೇಶ ಹಬ್ಬಗಳ ಆಚರಣೆ





ಬೆಳಗಾವಿಯ ಕೆ ಎಲ್ ಎಸ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಎಜುಕೇಶನ್ ಸ್ಥಾಪನಾ ದಿನದಂದು ತೇಜಸ್ವಿನಿ ಅನಂತಕುಮಾರ್ ಅವರಿಂದ ಭಾಷಣ

ಸಿಲಿಕಾನ್ ಸಿಟಿಯಲ್ಲಿ ಭೀಕರ ಮಳೆಯಿಂದ ನೊಂದ ಸಂತ್ರಸ್ತರಿಗೆ 42000 ಊಟ ಒದಗಿಸಿದ ಅದಮ್ಯ ಚೇತನದ ಕಾರ್ಯಕರ್ತರು

# ಸ್ಪರ್ಧೆಯಲ್ಲಿ ಸಹಭಾಗಿತ್ವ – ಸಮಸ್ಯೆಗಳಿಗೆ ಪರಿಹಾರ



**ನಿಪುಣ್ ಮೆಹ್ರೋತ್ರಾ**
ಅಗ್ರಿಕೊಲಾಬೊರೇಟರಿ
ಸರ್ಕಾರೇತರ ಸಂಸ್ಥೆಯ ಸಂಸ್ಥಾಪಕ

ದೇಶವು ಎದುರಿಸುತ್ತಿರುವ ವಿಭಿನ್ನ ಸಮಸ್ಯೆಗಳ ಹಿನ್ನೆಲೆಯಲ್ಲಿ ಅನಂತಕುಮಾರ್ ಪ್ರತಿಷ್ಠಾನವು ಆಯೋಜಿಸುತ್ತಿರುವ "ದೇಶ ಮೊದಲು" ಸಂವಾದ ಕಾರ್ಯಕ್ರಮವು ಸ್ವಾಗತಾರ್ಹ. ಕಳೆದ ಒಂದು ದಶಕದಲ್ಲಿ ನಾವು ಹಲವಾರು ಸಾಮಾಜಿಕ ಸಮಸ್ಯೆಗಳನ್ನು ಎದುರಿಸಿದ್ದೇವೆ. ಈ ಸಮಸ್ಯೆಗಳನ್ನು ಹಲವು ದೃಷ್ಟಿಕೋನಗಳಲ್ಲಿ ಮತ್ತು ಹಲವಾರು ಆಯಾಮಗಳಿಂದ ಪರಿಗಣಿಸಬಹುದು. ಸಾಮಾಜಿಕ ಸಮಸ್ಯೆಗಳನ್ನು ಎದುರಿಸಲು ಖಾಸಗಿ, ಸಹಕಾರಿ ಮತ್ತು ಸಾರ್ವಜನಿಕ ಪರಿಸರವ್ಯವಸ್ಥೆಗಳು ಪರಸ್ಪರ ಸಹಕಾರದಿಂದ ಕೆಲಸ ಮಾಡುವ ಬಗೆಗಳ ಕುರಿತು ಚಿಂತಿಸುವ ಅಗತ್ಯ ಎಂದಿಗಿಂತಲೂ ಇಂದು ಹೆಚ್ಚಾಗಿದೆ. ಮಾನ್ಯ ಪ್ರಧಾನಮಂತ್ರಿಗಳು ಸ್ವಾತಂತ್ರ್ಯದ ಅಮೃತಮಹೋತ್ಸವದ ಸಂದರ್ಭದಲ್ಲಿ ಮಾತನಾಡುತ್ತ ಭಾರತವು ತನ್ನ ನೂರನೆಯ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮಿಸುವ ಸಮಯದಲ್ಲಿ ಅಭಿವೃದ್ಧಿ ಹೊಂದಿದ ದೇಶಗಳ ಸಾಲಿನಲ್ಲಿರಬೇಕೆಂಬ ಮಹತ್ವಾಕಾಂಕ್ಷೆಯನ್ನು ವ್ಯಕ್ತಪಡಿಸಿದರು. ಇದು ಸಾಧ್ಯವಾಗಬೇಕಾದರೆ ಹೊಸಹೊಸ ಅವಿಷ್ಕಾರಗಳಾಗಬೇಕು. ಈ ಆವಿಷ್ಕಾರಗಳ ಗತಿ ನಮ್ಮ ದೇಶದ ಜನಸಂಖ್ಯೆಯ ಹೆಚ್ಚಳಕ್ಕೆ ಅನುಲೋಮವಾಗಿರಬೇಕಲ್ಲದೆ ಇಡೀ ಜನಸಮುದಾಯಕ್ಕೆ ಪ್ರಯೋಜನವಾಗುವಂತಿರಬೇಕು.

ಸಮಾಜದಲ್ಲಿರುವ ನಮ್ಮ ಅನೇಕ ಸಂಕೀರ್ಣ ಸಮಸ್ಯೆಗಳನ್ನು ನಾವು ಖಾಸಗಿ ಮತ್ತು ಸರಕಾರೀ ಕ್ಷೇತ್ರಗಳ ಸಹಭಾಗಿತ್ವದಿಂದ ಪರಿಹರಿಸಬಹುದು. ಇದು ನಮ್ಮ ದೇಶಕ್ಕೆ ಹೊಸದಲ್ಲ. ಈ ಹಿಂದೆ ಕೋವಿಡ್‌ನಂತಹ ಬೃಹತ್ ಸಮಸ್ಯೆಗಳ ಕಾಲದಲ್ಲಿ ಈ ಪ್ರಯೋಗವನ್ನು ಮಾಡಿ ಯಶಸ್ವಿಯಾಗಿದ್ದೇವೆ. ಭಾರತವು ಇಂದು ನೈರ್ಮಲ್ಯ, ಪರಿಸರ ಮಾಲಿನ್ಯ, ಹವಾಮಾನ ವ್ಯತ್ಯಯ, ಅಪೌಷ್ಟಿಕತೆ, ಜಲಸಂಪನ್ಮೂಲ, ಮುಂತಾದ ಅನೇಕ ಸಮಸ್ಯೆಗಳ ಜೊತೆಗೆ ಕೃಷಿಕ್ಷೇತ್ರದಲ್ಲಿಯೂ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಗಳು ನಮ್ಮ ದೇಶಕ್ಕೆ ಸೀಮಿತವೆಂದು ಭಾವಿಸಬಾರದು. ಜಗತ್ತಿನ ಅನೇಕ ದೇಶಗಳೂ ಈ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿವೆ. ಹೀಗಾಗಿ, ಯಾವ ಕ್ಷೇತ್ರದಲ್ಲಿ ಆದ್ಯತೆಯ ಮೇಲೆ ಆವಿಷ್ಕಾರಗಳು ನಡೆಯಬೇಕೆಂದು ನಾವೇ ನಿರ್ಧರಿಸಿಕೊಳ್ಳಬೇಕು.

ಭಾರತವು ಕೃಷಿ ಪ್ರಧಾನ ದೇಶ. ದೇಶದಲ್ಲಿ ಲಭ್ಯವಿರುವ ನೀರಿನ ಶೇ 85 ರಷ್ಟನ್ನು ಕೃಷಿಕ್ಷೇತ್ರವೇ ಬಳಸಿಕೊಳ್ಳುತ್ತಿದೆ. ಶೇ 50 ರಷ್ಟು ಕಾರ್ಮಿಕರೂ ಈ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶೇ 45 ರಿಂದ 50 ರಷ್ಟು ಜನರು ಕೃಷಿಯನ್ನೇ ಅವಲಂಬಿಸಿದ್ದರೂ ಗ್ರಾಮೀಣ ಭಾರತದಲ್ಲಿ ಕಾರ್ಮಿಕರ ಕೊರತೆಯಿದೆ. ಸಣ್ಣ ಮತ್ತು ಸೀಮಾಂತ ಹಿಡುವಳಿದಾರರಿಗೆ, ಗುತ್ತಿಗೆ ಕೃಷಿಕರಿಗೆ ಮತ್ತು ಮಹಿಳೆಯರಿಗೆ ಹಣಕಾಸು ಮತ್ತು ಕೌಶಲ್ಯಗಳು ಮುಕ್ತವಾಗಿ ದೊರೆಯುತ್ತಿಲ್ಲ. ಡಿಜಿಟಲ್ ತಂತ್ರಜ್ಞಾನ ಇನ್ನೂ ಈ ಕ್ಷೇತ್ರದಲ್ಲಿ ಸಾಕಷ್ಟು ತೊಡಗಿಕೊಂಡಿಲ್ಲ. ಪರಿಸರದಲ್ಲಿ ಕೀಟನಾಶಕಗಳ ಉಳಿಕೆಯೂ ಒಂದು ದೊಡ್ಡ ಸಮಸ್ಯೆ.

ಇಂದು ಕೃಷಿಕ್ಷೇತ್ರವು ಲಾಭದಾಯಕವಾಗಿಲ್ಲವೆಂಬುದು ಸಾರ್ವತ್ರಿಕ ಅಭಿಪ್ರಾಯ. ಈ ಕ್ಷೇತ್ರದಲ್ಲಿ ವಾರ್ಷಿಕವಾಗಿ ಸುಮಾರು 92000 ಕೋಟಿ ರೂಪಾಯಿಗಳ ಮೌಲ್ಯದ ಆಹಾರ ಸಾಮಗ್ರಿ ವ್ಯರ್ಥವಾಗುತ್ತಿದೆಯೆಂಬುದೂ ನಮ್ಮ ಗಮನದಲ್ಲಿರಬೇಕು. ಆವಿಷ್ಕಾರವೆಂದರೆ ಹೊಸತನ್ನು ಕಂಡುಹಿಡಿಯುವುದು ಎಂಬದು ನಿಜ. ಆದರೆ ನಾವಿಂದು ವಿವಿಧ ಕ್ಷೇತ್ರಗಳ ನಡುವಣ ಸಹಯೋಗದ ಹೊಸ ಮಾರ್ಗಗಳ ಆವಿಷ್ಕಾರದ ಕುರಿತು ಮಾತನಾಡುತ್ತಿದ್ದೇವೆ. ಕೃಷಿಕ್ಷೇತ್ರವನ್ನು ಆರ್ಥಿಕವಾಗಿ ಲಾಭಹೀನ ಎಂದು ಪರಿಗಣಿಸುವಂತಿಲ್ಲ. ತಡೆರಹಿತ ಡಿಜಿಟಲ್ ತಂತ್ರಜ್ಞಾನದ ಬಳಕೆಯಿಂದ 270 ರಿಂದ 300 ಬಿಲಿಯನ್ ಡಾಲರುಗಳ ಕ್ಷೇತ್ರದಲ್ಲಿ ವಾರ್ಷಿಕವಾಗಿ 50 ರಿಂದ 70 ಬಿಲಿಯ ಡಾಲರುಗಳಷ್ಟು ಹೆಚ್ಚುವರಿ ಆದಾಯವನ್ನು ಗಳಿಸಬಹುದಾಗಿದೆ. ಇದು ಸಾಧ್ಯವಾಗಲು ನೂತನ ಆವಿಷ್ಕಾರಗಳು ನಡೆಯಬೇಕು. ಈ ಆವಿಷ್ಕಾರಗಳ ಪ್ರಯೋಜನ ಎಲ್ಲರಿಗೂ ಮುಕ್ತವಾಗಿರಬೇಕು. ನಮ್ಮ ಎದುರಿಗಿರುವ ಸಮಸ್ಯೆಯ ಅಗಾಧತೆಯನ್ನು ಗಮನಿಸಿ ಈ ಕ್ಷೇತ್ರದಲ್ಲಿ ಆವಿಷ್ಕಾರಗಳನ್ನು ಮಾಡುವ ಸಾಹಸಕ್ಕೆ ಅನೇಕರು ಮುಂದೆ ಬರುತ್ತಿಲ್ಲ. ಕೃಷಿಕ್ಷೇತ್ರದಲ್ಲಿ ಅನೇಕ ಸ್ಟಾರ್ಟ್-ಅಪ್ ಕಂಪೆನಿಗಳು ಕೆಲಸ ಮಾಡುತ್ತಿವೆ. ಆದರೆ ಇವು ಯಾವುವೂ ಕ್ಷೇತ್ರದ ಆಳವನ್ನು ಪ್ರವೇಶಿಸದೆ ಮೇಲ್ಮಟ್ಟದ ಸಮಸ್ಯೆಗಳಿಗೆ ಸಮಾಧಾನ ಹುಡುಕುವ ಕೆಲಸದಲ್ಲಿಯೇ ನಿರತವಾಗಿವೆ. ರೈತರೊಂದಿಗೆ ಮತ್ತು ಗ್ರಾಹಕರೊಂದಿಗೆ ಮುಖಾಮುಖಿ ಏರ್ಪಡಿಸುವ ವೇದಿಕೆಗಳ ಕುರಿತು ಕೆಲಸ ನಡೆಯುತ್ತಿದೆ. ಆದರೆ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಯತ್ನಗಳು ತೃಪ್ತಿಕರವಾಗಿಲ್ಲ.

ಕೇವಲ ಲಾಭವನ್ನೇ ಗುರಿಯಾಗಿರಿಸಿಕೊಂಡರೆ ಕೃಷಿ ಕ್ಷೇತ್ರದಲ್ಲಿ ಆವಿಷ್ಕಾರಗಳಿಗೆ ಹಿನ್ನಡೆಯಾಗುವುದು ಸಹಜ. ಆದರೆ ಇದು ಸಂಕುಚಿತ ದೃಷ್ಟಿ ಎನ್ನಬಹುದು. ನಮ್ಮ ದೇಶದಲ್ಲಿ ನಾವು ಹೆದ್ದಾರಿಗಳು, ವಿದ್ಯುತ್ ಸ್ಥಾವರಗಳು, ಅಣೆಕಟ್ಟುಗಳು ಮುಂತಾದ ಭೌತಿಕ ಮೂಲ ಸೌಕರ್ಯಗಳನ್ನು ಸಾಕಷ್ಟು ನಿರ್ಮಾಣ ಮಾಡಿದ್ದೇವೆ. ಆದರೆ ಅದೇ ಪ್ರಮಾಣದಲ್ಲಿ ಡಿಜಿಟಲ್ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವತ್ತ ಗಮನ ಹರಿಸಿಲ್ಲ. ಉದಾಹರಣೆಗೆ ಅಂತರ್ಜಾಲ. ಇದೊಂದು ಮುಕ್ತ ವಾತಾವರಣ. ಇದರ ಸಮುಚಿತ ಬಳಕೆಯಿಂದ ಎಷ್ಟೊಂದು ಜನರು ತಮ್ಮ ಜೀವನವನ್ನೇ ಬದಲಿಸಿಕೊಂಡಿದ್ದಾರೆ. ಖಾಸಗಿ, ಸರಕಾರಿ ಮತ್ತು ಇತರ ಪರಿಸರ ವ್ಯವಸ್ಥೆಗಳ ಯಶಸ್ವೀ ಸಹಭಾಗಿತ್ವಕ್ಕೆ ಆರೋಗ್ಯ ಸೇತು ವೇದಿಕೆ ಒಂದು ಉತ್ತಮ ಉದಾಹರಣೆ. ಭೀಮ್ ಪಾವತಿ ವ್ಯವಸ್ಥೆ ಕೂಡ ಒಂದು ಉತ್ತಮ ವಿಶ್ವದರ್ಜೆಯ ವೇದಿಕೆ. ಆದುದರಿಂದ ನಮ್ಮಲ್ಲಿ ಪ್ರತಿಭೆಗಳಿಗೆ ಕೊರತೆಯಿಲ್ಲ. ಆದರೆ ಹೊಸಯುಗದ ಸಂಕೀರ್ಣ ಸಮಸ್ಯೆಗಳನ್ನು ಎದುರಿಸಲು ಮಾನಸಿಕ ನೆಲೆಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕು.

ಸ್ಪರ್ಧೆಯ ಬದಲು ಸಹಯೋಗ, ಡಿಜಿಟಲ್ ಸ್ವತ್ತುಗಳನ್ನು ವೈಯಕ್ತಿಕ ಸಂಕೋಲೆಗಳಿಂದ ಬಿಡಿಸಿ ಸಾರ್ವಜನಿಕಗೊಳಿಸುವುದು, ಆವಿಷ್ಕಾರದಲ್ಲಿ ವ್ಯಕ್ತಿ/ನಿಗಮಗಳ ಬದಲು ಸಮುದಾಯ/ಪರಿಸರ ವ್ಯವಸ್ಥೆಗಳನ್ನು ತೊಡಗಿಸುವುದು, ಸ್ಪರ್ಧೆಯಲ್ಲಿಯೂ ಸಹಯೋಗ, ಖಾಸಗಿ ಹಿಡಿತದಿಂದ ತಪ್ಪಿಸಿ ಮುಕ್ತ ಸಂಪನ್ಮೂಲವಾಗಿಸುವುದು, ವಾಣಿಜ್ಯಿಕ ಲಾಭದ ಜೊತೆಗೆ ಸಾಮಾಜಿಕ ಪರಿಣಾಮದ ಗಣನೆ, ವೈಯಕ್ತಿಕ ಗುರಿಗಳ ಬದಲು ಸಾಮಾಜಿಕ ಉದ್ದೇಶ, ಉದ್ಯೋಗದ ಬದಲು ಸ್ವಯಂಸೇವೆಯ ಕಲ್ಪನೆ ಇವೆಲ್ಲವೂ ಆವಿಷ್ಕಾರದಲ್ಲಿ ಸಹಭಾಗಿತ್ವದ ಕುರಿತು ಮುನ್ನಡೆಯುವಾಗ ನಾವು ನಮ್ಮ ಮಾನಸಿಕಸ್ತರದಲ್ಲಿ ಒಗ್ಗಿಸಿಕೊಳ್ಳಬೇಕಾಗಿರುವ ಬದಲಾವಣೆಗಳು.

ಬೃಹತ್ ಕಾರ್ಪೊರೇಟುಗಳು ಕೇವಲ ಲಾಭವೊಂದನ್ನೇ ಪರಿಗಣಿಸುವ ಬದಲು ಸಾಮಾಜಿಕ ಪರಿಣಾಮಗಳ ಬಗ್ಗೆಯೂ ಯೋಚಿಸಬೇಕು, ಸರಕಾರೇತರ ಸಂಸ್ಥೆಗಳೂ ಕೇವಲ ಕಾರ್ಯಕ್ರಮಗಳ ಜಾರಿಗೆ ಯತ್ನಿಸುವುದರ ಜೊತೆಗೆ ಸಾಮಾಜಿಕ ಪರಿಣಾಮವನ್ನು ಅನುಲಕ್ಷಿಸಿ ತಮ್ಮ ಕಾರ್ಯಕ್ಷೇತ್ರವನ್ನು ಎತ್ತರಿಸಿಕೊಳ್ಳಬೇಕು. ಡಿಜಿಟಲ್ ಮೂಲಸೌಕರ್ಯಗಳನ್ನು ಸಾರ್ವನಿಕ ಒಡೆತನಕ್ಕೆ ತರುವುದು ಇಂದಿನ ಅಗತ್ಯವಾಗಿದೆ.

**(ದೇಶ ಮೊದಲು ಸಂವಾದದ 10ನೇ ಆವೃತ್ತಿಯಲ್ಲಿ ಮಾಡಿದ ಭಾಷಣ)**

## ಅನಂತಪಥ

Editorial Advisory Committee: **Dr. Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Madhumathi Kumbaluru**
Inputs: **Poornaprajna / Sreelakshmi Vishwanath / Srikanth K**
Photographs: **Adamya Chethana / Gopal TS / Chakrapani Kengeri / Internet Sources**
Acknowledgements: **Dr Vamanacharya / Rama Murthy / Chaya Bapat / Krishna Sampagaonkar / Sahabalve Trust / DR Subramanya Pradeep Oak / N R Subramanya**
Sketch: **Rashmi Killedar / Raghupathi Sringeri** Printed at: **Rashtrothana Mudranalaya, Chamrajpet, Bengaluru**
Published by: **Dr. Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ರಿಕಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415